# ರಸಾಯನಶಾಸ್ತ್ರ
# CHEMISTRY

ತರಗತಿ

X

# ಪ್ರಶ್ನೆಗಳ ಸಂಗ್ರಹ
# QUESTION POOL

ಕೇರಳ ಸರಕಾರ

ವಿದ್ಯಾಭ್ಯಾಸ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)

ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ–695 012

Phone: 0471 - 2341883, 2340323, e-mail: scertkerala@gmail.com

*Prepared by:*
State Council of Educational
Research & Training (SCERT)
Poojappura, Thiruvananthapuram -12,
Kerala. E-mail:scertkerala@gmail.com

*Type setting by:*
SCERT Computer Lab.

©
Government of Kerala
Education Department
2016

## ಮುನ್ನುಡಿ

ಕಲಿಕೆಯ ಪ್ರಗತಿಯನ್ನು ತಿಳಿಯಲು ಮತ್ತು ಉತ್ತಮಗೊಳಿಸಲು ಕಲಿಕೆಯೊಂದಿಗೆ ಮೌಲ್ಯಮಾಪನವು ನಡೆಯಬೇಕು. ಆಶಯ ರೂಪೀಕರಣಕ್ಕೆ ಸಂಬಂಧಿಸಿ ಎಷ್ಟರಮಟ್ಟಿಗೆ ಮುನ್ನಡೆಯಲು ಸಾಧ್ಯವಾಗಿದೆಯೆಂದೂ ಯಾವ ಯಾವ ವಲಯಗಳಲ್ಲಿ ವಿಶೇಷ ಅಭಿರುಚಿ ಇದೆ ಎಂಬುದನ್ನು ಗುರುತಿಸಲೂ ಇದು ಸಹಕಾರಿಯಾಗುತ್ತದೆ. ಕಲಿಕೆಯ ಚಟುವಟಿಕೆಗಳೊಂದಿಗೆ ನಡೆಸುವ ನಿರಂತರ ಮೌಲ್ಯಮಾಪನ ಇದರಲ್ಲಿ ಬಹಳ ಮುಖ್ಯವಾಗಿದೆ. ಪ್ರತಿಯೊಂದು ಹಂತದಲ್ಲೂ ಗಳಿಸಿದ ಕಲಿಕೆಯ ಸಾಧನೆಗಳನ್ನು ಪರಿಶೀಲಿಸಿ ಖಚಿತಪಡಿಸಲು ಟರ್ಮ್ ಮೌಲ್ಯಮಾಪನ ಸಹಾಯ ಮಾಡುತ್ತದೆ. ಅದಕ್ಕಿರುವ ಮಾರ್ಗಸೂಚಿಯಾಗಿ ಈ ಪುಸ್ತಕವನ್ನು ತಯಾರಿಸಲಾಗಿದೆ.

ಹತ್ತನೇ ತರಗತಿಯ ಪ್ರತಿಯೊಂದು ಅಧ್ಯಾಯಕ್ಕೂ ಜ್ಞಾನ ನಿರ್ಮಾಣದ ಆಧಾರದಲ್ಲಿರುವ ಕಲಿಕೆಯ ಚಟುವಟಿಕೆಗಳಾಗಿ ಪ್ರಶ್ನೆಗಳ ಮಾದರಿಯನ್ನು ಸೇರಿಸಲಾಗಿದೆ. ಪ್ರತಿಯೊಂದು ಹಂತದಲ್ಲೂ ಮಗು ಗಳಿಸುವ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡಲು ಮೌಲ್ಯಮಾಪನ ಸೂಚಕಗಳನ್ನೂ ಅಂಕಗಳನ್ನೂ ನೀಡಲಾಗಿದೆ. ಇವಲ್ಲದೆ ಹೆಚ್ಚಿನ ಕಲಿಕೆಯ ಚಟುವಟಿಕೆಗಳನ್ನು ತರಗತಿ ಕೋಣೆಯ ಒಳಗೆ ಮಂಡಿಸಿ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಅಭಿವೃದ್ಧಿಪಡಿಸಲು ಅಧ್ಯಾಪಕರು ಗಮನಿಸಬೇಕು.

ಯಶಸ್ವಿ ಕಲಿಕೆಗೆ ಈ ಪುಸ್ತಕ ಮಾರ್ಗದರ್ಶಿಯಾಗಲಿ.

ಶುಭ ಹಾರೈಕೆಗಳೊಂದಿಗೆ

**ನಿರ್ದೇಶಕರು**

# ಅನುಕ್ರಮಣಿಕೆ

**ವಿಭಾಗ ಎ**

ಪ್ರಶ್ನೆಗಳ ಸಂಗ್ರಹ

1. ಆವರ್ತಕ ಪಟ್ಟಿ ಮತ್ತು ಇಲೆಕ್ಟ್ರೋನ್ ವಿನ್ಯಾಸ
2. ಮೋಲ್ ಕಲ್ಪನೆ
3. ರಾಸಾಯನಿಕ ಕ್ರಿಯಾ ವೇಗ ಮತ್ತು ರಾಸಾಯನಿಕ ಸಮತೋಲನ
4. ಕ್ರಿಯಾಶೀಲ ಶ್ರೇಣಿ ಮತ್ತು ವಿದ್ಯುತ್ ರಸಾಯನ ಶಾಸ್ತ್ರ
5. ಲೋಹಗಳ ಉತ್ಪಾದನೆ
6. ಸಾವಯವ ಯೌಗಿಕಗಳ ನಾಮಕರಣ
7. ಸಾವಯವ ಯೌಗಿಕಗಳ ರಾಸಾಯನಿಕ ಕ್ರಿಯೆಗಳು
8. ಮಾನವನ ಪ್ರಗತಿಗೆ ರಸಾಯನ ಶಾಸ್ತ್ರ

**ವಿಭಾಗ ಬಿ**

ಮೌಲ್ಯಮಾಪನ ಸೂಚಕಗಳು

**ವಿಭಾಗ ಸಿ**

ಮಾದರಿ ಪ್ರಶ್ನೆ ಪತ್ರಿಕೆಗಳು

# 1

# ಆವರ್ತಕ ಪಟ್ಟಿ ಮತ್ತು ಇಲೆಕ್ಟ್ರೋನ್ ವಿನ್ಯಾಸ

**ಕಲಿಕೆಯ ಸಾಧನೆ**

- ಸಬ್ ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಮೂಲವಸ್ತುಗಳ ಸ್ವಭಾವ ಮತ್ತು ಆವರ್ತಕ ಪಟ್ಟಿಯಲ್ಲಿ ಸ್ಥಾನವನ್ನು ತಿಳಿದುಕೊಳ್ಳುತ್ತಾರೆ.

1. A, B, C, D ಎಂಬೀ ಮೂಲವಸ್ತುಗಳ ಇಲೆಕ್ಟ್ರೋನ್ ವಿನ್ಯಾಸವನ್ನು ಕೆಳಗೆ ನೀಡಲಾಗಿದೆ.

A - $1s^2 2s^2 2p^6 3s^2 3p^4$

B - $1s^2 2s^2 2p^6 3s^2$

C - $1s^2 2s^2 2p^6 3s^2 3p^5$

D - $1s^2 2s^2 2p^6 3s^1$

a) ಇವುಗಳಲ್ಲಿ +2 ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವ ಮೂಲವಸ್ತು ಯಾವುದು? (1)

b) 17ನೇ ಕುಟುಂಬದಲ್ಲಿರುವ ಮೂಲವಸ್ತು ಯಾವುದು? (1)

c) ಮೂಲವಸ್ತು A ಯ ಆವೃತ್ತಿ ಸಂಖ್ಯೆ ಎಷ್ಟು? ಇದನ್ನು ಕಂಡುಹಿಡಿಯಲು ಸಹಾಯ ಮಾಡಿದ ಆಶಯ ಯಾವುದು? (1)

d) ಇವುಗಳಲ್ಲಿ ಯಾವ ಯಾವ ಮೂಲವಸ್ತುಗಳ ಓಕ್ಸೈಡುಗಳು ಬೇಸಿಕ್ ಸ್ವಭಾವವನ್ನು ಪ್ರದರ್ಶಿಸುತ್ತದೆ? (1)

ಸ್ಕೋರ್ 4, ಸಮಯ 7 ನಿಮಿಷ

---

**ಕಲಿಕೆಯ ಸಾಧನೆ**

d - ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

2. ಕಬ್ಬಿಣದ ಎರಡು ಯೌಗಿಕಳನ್ನು ನೀಡಲಾಗಿದೆ.

$FeSO_4$ $Fe_2(SO_4)_3$

(ಸಲ್ಫೇಟ್ ಬಣದ ಉತ್ಕರ್ಷಣ ಸ್ಥಿತಿ–2)

a) ಕಬ್ಬಿಣವು +2 ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವ ಯೌಗಿಕ ಯಾವುದು? (1)

b) $Fe^{3+}$ ಅಯೋನ್ ಕಂಡುಬರುವ ಯೌಗಿಕ ಯಾವುದು? (1)

c) $Fe^{3+}$ ಅಯೋನಿನ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. (1)

d) ಮಧ್ಯಸ್ಥ ಮೂಲವಸ್ತುಗಳು ವಿಭಿನ್ನ ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸಲಿರುವ ಕಾರಣವೇನು? (1)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಮೂಲವಸ್ತುಗಳ ಸಬ್‌ಶೆಲ್ ಆಧಾರದಲ್ಲಿರುವ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಲು ಸಾಧ್ಯವಾಗುತ್ತದೆ.

3. ಕೆಳಗೆ ನೀಡಲಾದ ಇಲೆಕ್ಟ್ರೋನ್ ವಿನ್ಯಾಸಗಳಲ್ಲಿ ತಪ್ಪಾದವುಗಳನ್ನು ಕಂಡುಹಿಡಿದು ಸರಿಪಡಿಸಿ ಬರೆಯಿರಿ.

i) $1s^2 2s^2 2p^3$

ii) $1s^2 2s^2 2p^6 3s^1$

iii) $1s^2 2s^2 2p^6 2d^7$

iv) $1s^2 2s^2 2p^6 3s^2 3p^6 3d^4$

ಸ್ಕೋರ್ 2, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಆವರ್ತಕ ಪಟ್ಟಿಯಲ್ಲಿ ಅದರ ಸ್ಥಾನ, ಮೂಲವಸ್ತುವಿನ ಸ್ವಭಾವ ಎಂಬಿವುಗಳನ್ನು ತಿಳಿದುಕೊಳ್ಳುತ್ತಾರೆ.

4. ಪಟ್ಟಿಯನ್ನು ಪೂರ್ತಿಗೊಳಿಸಿರಿ.

ಸ್ಕೋರ್ 3, ಸಮಯ 5 ನಿಮಿಷ

| ಬಾಹ್ಯ ವಲಯ ಇಲೆಕ್ಟ್ರೋನ್ ವಿನ್ಯಾಸ | ಗುಂಪು ಸಂಖ್ಯೆ | ಉತ್ಕರ್ಷಣ ಸ್ಥಿತಿ |
|---|---|---|
| $3s^2 3p^4$ | 16 | ...(a)... |
| $3s^1$ | ...(b)... | +1 |
| $2s^2 2p^5$ | ...(c)... | ...(d)... |
| $3d^{10} 4s^2$ | ...(e)... | ...(f)... |

**ಕಲಿಕೆಯ ಸಾಧನೆ**

ಯೌಗಿಕಗಳ ಉತ್ಕರ್ಷಣ ಸ್ಥಿತಿಯನ್ನು ತಿಳಿದುಕೊಳ್ಳುತ್ತಾರೆ.

5. a) $XY_2$, $XZ_4$ ಎಂಬೀ ಯೌಗಿಕಗಳನ್ನು ನೀಡಲಾಗಿದೆ. Z ಎಂಬ ಮೂಲವಸ್ತುವಿನ ಉತ್ಕರ್ಷಣ ಸ್ಥಿತಿ –1. ಹಾಗಾದರೆ Y ಯ ಉತ್ಕರ್ಷಣ ಸ್ಥಿತಿ ಎಷ್ಟು? (2)

b) Y ಎಂಬ ಮೂಲವಸ್ತುವು +3 ಉತ್ಕರ್ಷಣ ಸ್ಥಿತಿಯಲ್ಲಿರುವ ಅಲ್ಯುಮಿನಿಯಂ (Al) ಜೊತೆಗೆ ಸಂಯೋಜಿಸಲ್ಪಟ್ಟರೆ ದೊರೆಯುವ ಯೌಗಿಕದ ಅಣುಸೂತ್ರವನ್ನು ಬರೆಯಿರಿ. (1)

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

f - ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

6. ಕೆಳಗೆ ನೀಡಲಾದವುಗಳಲ್ಲಿ f - ಬ್ಲೋಕ್ ಮೂಲವಸ್ತುಗಳಿಗೆ ಸರಿಹೊಂದುವವುಗಳನ್ನು ಆಯ್ಕೆ ಮಾಡಿ ಬರೆಯಿರಿ.

a) ಇವೆಲ್ಲವುಗಳು ಪ್ರಾಕೃತಿಕ ಮೂಲವಸ್ತುಗಳಾಗಿವೆ.

b) ಯುರೇನಿಯಂ, ಥೋರಿಯಂ ಇತ್ಯಾದಿಗಳು ನ್ಯೂಕ್ಲಿಯರ್ ಇಂಧನವಾಗಿ ಉಪಯೋಗಿಸಲ್ಪಡುತ್ತವೆ.

c) ಬಾಹ್ಯವಲಯದ ಒಳಗಿನ ವಲಯಕ್ಕಿಂತಲೂ ಒಳಗಿರುವ ವಲಯದಲ್ಲಿ ಇಲೆಕ್ಟ್ರೋನ್ ತುಂಬಲ್ಪಡುವುದು.

d) ಬಾಹ್ಯವಲಯದ ಒಳಗಿನ ವಲಯಕ್ಕಿಂತಲೂ ಒಳಗಿರುವ ವಲಯದ ಒಳಗೆ ಇಲೆಕ್ಟ್ರೋನ್ ಇರುವುದಾಗಿದೆ.

e) ಕೆಲವು ರೇಡಿಯೋ ಏಕ್ಟಿವ್ ಮೂಲವಸ್ತುಗಳನ್ನು ಒಳಗೊಂಡಿವೆ.

f) ಇವುಗಳಲ್ಲಿ ಹಲವು ಪೆಟ್ರೋಲಿಯಂ ಉದ್ಯಮದಲ್ಲಿ ಕೈಗಾರಿಕೆಯಲ್ಲಿ ಪ್ರೇರಕಗಳಾಗಿ ಉಪಯೋಗಿಸಲ್ಪಡುತ್ತವೆ.

ಸ್ಕೋರ್ 2, ಸಮಯ 5 ನಿಮಿಷ

## ಕಲಿಕೆಯ ಸಾಧನೆ

ಸಬ್‌ಶೆಲ್ ಆಧಾರದಲ್ಲಿರುವ ಮೂಲವಸ್ತುಗಳ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆದು ಸಂಯೋಜಕತೆಯನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ.

7. ನಾಲ್ಕು ಮೂಲವಸ್ತುಗಳ ಪರಮಾಣು ಸಂಖ್ಯೆಯನ್ನು ನೀಡಲಾಗಿದೆ.

A - 8 (ಸಂಕೇತಗಳು ನಿಜವಾದವುಗಳಲ್ಲ)

B - 10

C - 12

D - 18

a) ಸಬ್‌ಶೆಲ್ ಆಧಾರದಲ್ಲಿ ಇವುಗಳ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. . (2)

b) ಇವುಗಳಲ್ಲಿ ಜಡ ಅನಿಲಗಳು ಯಾವುವು? (1)

c) ಇತರ ಎರಡು ಮೂಲವಸ್ತುಗಳು ಸೇರಿ ಉಂಟಾಗುವ ಯೌಗಿಕದ ಅಣುಸೂತ್ರವನ್ನು ಬರೆಯಿರಿ.. (1)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆದು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

8. ಎರಡು ಮೂಲವಸ್ತುಗಳ ಕೊನೆಯ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಕೆಳಗೆ ನೀಡಲಾಗಿದೆ.

P - $3s^2$ Q - $3p^4$

a) ಇವುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಪೂರ್ಣವಾಗಿ ಬರೆಯಿರಿ. (1)

b) ಪ್ರತಿಯೊಂದು ಮೂಲವಸ್ತುವಿನ ಉತ್ಕರ್ಷಣ ಸ್ಥಿತಿಯನ್ನು ಕಂಡುಹಿಡಿಯಿರಿ. (1)

c) ಇವುಗಳು ಪರಸ್ಪರ ಜೊತೆ ಸೇರಿದರೆ ಉಂಟಾಗುವ ಯೌಗಿಕದ ಅಣುಸೂತ್ರ PQ ಈ ಹೇಳಿಕೆಯು ಸರಿಯಾಗಿದೆಯೆ ? ಸಮರ್ಥಿಸಿರಿ. (2)

ಸ್ಕೋರ್ 4, ಸಮಯ 8 ನಿಮಿಷ

**ಕಲಿಕೆಯ ಸಾಧನೆ**

ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

9. ಸೂಕ್ತವಾದ ರೀತಿಯಲ್ಲಿ ಜೊತೆಗೊಳಿಸಿ ಬರೆಯಿರಿ.

| ಬ್ಲೋಕ್ | ಬಾಹ್ಯವಲಯ ಇಲೆಕ್ಟ್ರೋನ್ ವಿನ್ಯಾಸ | ವೈಶಿಷ್ಟ್ಯ |
|---|---|---|
| s | $3p^5$ | ಹೆಚ್ಚಿನ ಯೌಗಿಕಗಳೂ ಬಣ್ಣ ಇರುವವುಗಳು |
| p | $3d^4\ 4s^2$ | ಲಾಂಥನೈಡುಗಳಲ್ಲಿ (ಆರನೇ ಆವೃತ್ತಿ) ಒಳಗೊಂಡಿದೆ. |
| d | $4f^1\ 5d^1\ 6s^2$ | ಆವೃತ್ತಿಯಲ್ಲಿ ಅತ್ಯಧಿಕ ಪರಮಾಣು ತ್ರಿಜ್ಯವನ್ನು ಹೊಂದಿದೆ. |
| f | $3s^1$ | ಅಧಿಕ ಇಲೆಕ್ಟ್ರೋನೆಗೆಟಿವಿಟಿ. |

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಬ್ಲೋಕ್, ಕುಟುಂಬ, ಆವೃತ್ತಿ ಎಂಬಿವುಗಳನ್ನು ತಿಳಿದುಕೊಳ್ಳುತ್ತಾರೆ.

10. ಎರಡು ಮೂಲವಸ್ತುಗಳ ಪರಮಾಣು ಸಂಖ್ಯೆಯನ್ನು ನೀಡಲಾಗಿದೆ.

Si - 14 Ni - 28

a) ಇವುಗಳ ಪೂರ್ಣವಾದ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. (2)

b) ಪ್ರತಿಯೊಂದು ಮೂಲವಸ್ತುವಿನ ಕುಟುಂಬ, ಆವೃತ್ತಿ ಇವುಗಳನ್ನು ಕಂಡುಹಿಡಿದು ಬರೆಯಿರಿ. (2)

ಸ್ಕೋರ್ 4, ಸಮಯ 7 ನಿಮಿಷ

**ಕಲಿಕೆಯ ಸಾಧನೆ**

ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಆವರ್ತಕ ಪಟ್ಟಿಯಲ್ಲಿ ಸ್ಥಾನ ಮತ್ತು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

11. X ಎಂಬ ಮೂಲವಸ್ತುವಿಗೆ 4 ವಲಯಗಳಿವೆ, ಇದರ 3d ಸಬ್‌ಶೆಲ್‌ನಲ್ಲಿ 6 ಇಲೆಕ್ಟ್ರೋನ್‌ಗಳಿವೆ. (ಸಂಕೇತಗಳು ನಿಜವಾದವುಗಳಲ್ಲ)

a) ಈ ಮೂಲವಸ್ತುವಿನ ಪೂರ್ಣವಾದ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. (1)

b) ಗ್ರೂಪ್ ಸಂಖ್ಯೆ ಎಷ್ಟು? ಬ್ಲೋಕ್ ಯಾವುದು? (1)

c) X ನ್ನು ಒಳಗೊಂಡಿರುವ ಬ್ಲೋಕಿನಲ್ಲಿರುವ ಮೂಲವಸ್ತುಗಳ ಎರಡು ವೈಶಿಷ್ಟ್ಯಗಳನ್ನು ಬರೆಯಿರಿ. (1)

d) ಈ ಮೂಲವಸ್ತು +2 ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವಾಗ ಯಾವ ಸಬ್‌ಶೆಲ್ಲಿನ ಇಲೆಕ್ಟ್ರೋನುಗಳನ್ನು ಬಿಟ್ಟುಕೊಡುವದು? (1)

ಸ್ಕೋರ್ 4, ಸಮಯ 7 ನಿಮಿಷ

**ಕಲಿಕೆಯ ಸಾಧನೆ**

ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಆವರ್ತಕ ಪಟ್ಟಿಯಲ್ಲಿ ಸ್ಥಾನ ಮತ್ತು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

12. A ಎಂಬ ಮೂಲವಸ್ತುವಿನ ಬಾಹ್ಯವಲಯದ ಇಲೆಕ್ಟ್ರೋನ್ ವಿನ್ಯಾಸ $2s^2 2p^2$ (ಸಂಕೇತಗಳು ನಿಜವಾದವುಗಳಲ್ಲ)

a) ಈ ಮೂಲವಸ್ತುವಿನ ಗ್ರೂಪ್ ಸಂಖ್ಯೆ, ಬ್ಲೋಕ್ ಎಂಬಿವುಗಳನ್ನು ಕಂಡುಹಿಡಿಯಿರಿ. (1)

b) A ಎಂಬ ಮೂಲವಸ್ತು ಕ್ಲೋರಿನ್ ಜೊತೆಗೆ ಸಂಯೋಜಿಸಲ್ಪಟ್ಟಾಗ ದೊರೆಯುವ ಯೌಗಿಕದ ಅಣುಸೂತ್ರವನ್ನು ಬರೆಯಿರಿ. (2)

c) ಆವರ್ತಕ ಪಟ್ಟಿಯಲ್ಲಿ A ಎಂಬ ಮೂಲವಸ್ತುವಿನ ನೇರ ಕೆಳಭಾಗದಲ್ಲಿ ಕಂಡುಬರುವ ಮೂಲವಸ್ತುವಿನ ಪೂರ್ಣವಾದ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. (1)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಆವರ್ತಕ ಪಟ್ಟಿಯಲ್ಲಿ ಮೂಲವಸ್ತುಗಳ ಸ್ಥಾನ ಮತ್ತು ವೈಶಿಷ್ಟ್ಯಗಳು ಮತ್ತು ಅವುಗಳ ನಡುವಿನ ಬಂಧವನ್ನು ತಿಳಿದುಕೊಳ್ಳುತ್ತಾರೆ.

13. ಆವರ್ತಕ ಪಟ್ಟಿಯ ಒಂದು ಅಪೂರ್ಣ ಚಿತ್ರವನ್ನು ನೀಡಲಾಗಿದೆ.




a) ಇವುಗಳಲ್ಲಿ –2 ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವ ಮೂಲವಸ್ತು ಯಾವುದು? (½)

b) ಕೊನೆಯ p ಸಬ್‌ಶೆಲ್ಲಿನಲ್ಲಿ 3 ಇಲೆಕ್ಟ್ರೋನುಗಳಿರುವ ಮೂಲವಸ್ತು ಯಾವುದು? (1)

c) ಪರಮಾಣು ತ್ರಿಜ್ಯ ಅಧಿಕವಾಗಿರುವ ಮೂಲವಸ್ತು ಯಾವುದು? (1)

d) ವಿಭಿನ್ನ ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವ ಮೂಲವಸ್ತು ಯಾವುದು? (1)

e) ಇವುಗಳಲ್ಲಿ ಅಯೋನೀಕರಣ ಚೈತನ್ಯವು ಅತ್ಯಧಿಕವಾಗಿರುವ ಮೂಲವಸ್ತು ಯಾವುದು? (½)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸದ ಆಧಾರದಲ್ಲಿ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾರೆ.

14. ನೀಡಲಾದ ಇಲೆಕ್ಟ್ರೋನ್ ವಿನ್ಯಾಸಗಳನ್ನು ಪರಿಶೀಲಿಸಿರಿ.

A - $1s^2 2s^2 2p^6 3s^2 3p^6 3d^{10} 4s^2$

B - $1s^2 2s^2 2p^6 3s^1$

C - $1s^2 2s^2 2p^6 3s^2 3p^6$

D - $1s^2 2s^2 2p^6 3s^2$

E - $1s^2 2s^2 2p^6 3s^2 3p^6 4s^1$

a) ಇವುಗಳಲ್ಲಿ 4ನೇ ಆವೃತ್ತಿಯಲ್ಲಿರುವ ಮೂಲವಸ್ತುಗಳು ಯಾವುವು? (1)

b) ಸಮಾನ ಗುಂಪಿನಲ್ಲಿರುವ ಮೂಲವಸ್ತುಗಳು ಯಾವುವು? (1)

c) ಸಾಮಾನ್ಯವಾಗಿ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸದ ಮೂಲವಸ್ತು ಯಾವುದು? (1)

d) ಅತ್ಯಧಿಕ ಲೋಹೀಯ ಸ್ವಭಾವವಿರುವ ಮೂಲವಸ್ತು ಯಾವುದು? (1)

ಸ್ಕೋರ್ 4, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

d - ಬ್ಲೋಕ್ ಮೂಲವಸ್ತುಗಳ ವೈಶಿಷ್ಟ್ಯಗಳನ್ನು ತಿಳಿಯುವುದು.

15. X, Y ಎಂಬೀ ಮೂಲವಸ್ತುಗಳ ಪರಮಾಣು ಸಂಖ್ಯೆಗಳು ಅನುಕ್ರಮವಾಗಿ 20, 26. ಇವುಗಳು ಕ್ಲೋರಿನ್ ಜೊತೆಗೆ ವರ್ತಿಸಿ $XCl_2$, $YCl_2$, $YCl_3$ ಎಂದು ಮೂರು ಯೌಗಿಕಗಳನ್ನು ಉಂಟುಮಾಡುತ್ತವೆ.

a) X ಎಂಬ ಮೂಲವಸ್ತುವಿಗೆ ಹೋಲಿಸಿದರೆ Y ಮೂಲವಸ್ತುವಿನ ಉತ್ಕರ್ಷಣ ಸ್ಥಿತಿಯ ವಿಶೇಷತೆಗಳೇನು? (1)

b) X, Y ಗಳ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆದು ಕಾರಣವನ್ನು ವಿವರಿಸಿರಿ. (2)

ಸ್ಕೋರ್ 3, ಸಮಯ 6 ನಿಮಿಷ

2

# ಮೋಲ್ ಕಲ್ಪನೆ

**ಕಲಿಕೆಯ ಸಾಧನೆ**

ಒಂದು GAM ಪದಾರ್ಥದಲ್ಲಿ ಅಡಕವಾಗಿರುವ ಕಣಗಳ ಸಂಖ್ಯೆಯನ್ನು ತಿಳಿದುಕೊಂಡು ಅವಗಾಡ್ರೊ ಸಂಖ್ಯೆಯನ್ನು ವಿವರಿಸುವುದು.

1. ಒಂದು GAM ಪದಾರ್ಥವನ್ನು ತೆಗೆದುಕೊಂಡರೆ ಅದರಲ್ಲಿ ಅವಗಾಡ್ರೊ ಸಂಖ್ಯೆಗೆ ಸಮಾನವಾದ ಸಂಖ್ಯೆಯ ಪರಮಾಣುಗಳಿರುತ್ತವೆ.

a) ಅವಗಾಡ್ರೊ ಸಂಖ್ಯೆ ಎಷ್ಟು? (1)

b) ಕೆಳಗೆ ನೀಡಲಾದ ಪ್ರತಿಯೊಂದರಲ್ಲಿ ಅಡಕವಾಗಿರುವ ಪರಮಾಣು ಸಂಖ್ಯೆಗಳನ್ನು ಬರೆಯಿರಿ.

i) 32g ಸಲ್ಫರ್ ii) 32g ಓಕ್ಸಿಜನ್

iii) 32g ಕಾರ್ಬನ್

(ಪರಮಾಣು ದ್ರವ್ಯರಾಶಿ S = 32, O = 16, C = 12) (3)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಒಂದು GAM ಪದಾರ್ಥದಲ್ಲಿ ಅಡಕವಾಗಿರುವ ಕಣಗಳ ಸಂಖ್ಯೆಯನ್ನು ತಿಳಿದುಕೊಂಡು ಅವಗಾಡ್ರೊ ಸಂಖ್ಯೆಯನ್ನು ವಿವರಿಸುವುದು.

2. a) ಕೆಳಗೆ ನೀಡಲಾದವುಗಳಿಂದ ಸಮಾನ ಸಂಖ್ಯೆಯ ಪರಮಾಣುಗಳಿರುವವುಗಳನ್ನು ಜೊತೆಗಳಾಗಿ ಬರೆಯಿರಿ. (2)

A. 2g ಹೈಡ್ರಜನ್ B. 16g ಓಕ್ಸಿಜನ್

C. 14g ನೈಟ್ರಜನ್ D. 8g ಹೀಲಿಯಂ

(ಪರಮಾಣು ದ್ರವ್ಯರಾಶಿ H = 1, O = 16, N = 14, He = 4)

b) ಪ್ರತಿಯೊಂದು ಜೊತೆಯಲ್ಲಿ ಅಡಕವಾಗಿರುವ ಪರಮಾಣುಗಳ ಸಂಖ್ಯೆಯನ್ನು ಕಂಡುಹಿಡಿದು ಬರೆಯಿರಿ. (2)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ರಾಸಾಯನಿಕ ಕ್ರಿಯೆಯಲ್ಲಿ ಪ್ರವರ್ತಕದ ಅಣುಗಳು ಮತ್ತು ಉತ್ಪನ್ನದ ಅಣುಗಳ ಸಂಖ್ಯೆಗಳ ನಡುವೆ ಒಂದು ನಿರ್ದಿಷ್ಟ ನಿಷ್ಪತ್ತಿ ಇದೆ ಎಂದು ವಿವರಿಸಲು ಸಾಧ್ಯವಾಗುತ್ತದೆ.

3. $N_2 + 3H_2 \rightarrow 2NH_3$

a) ಮೇಲೆ ನೀಡಲಾದ ರಾಸಾಯನಿಕ ಕ್ರಿಯೆಯಲ್ಲಿ ಪ್ರವರ್ತಕದ ಅಣುಗಳೊಳಗಿರುವ ನಿಷ್ಪತ್ತಿ ಯಾವುದು ?

b) ಕೆಳಗೆ ನೀಡಲಾದ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ನೈಟ್ರಜನ್ ಅಣುಗಳು | ಹೈಡ್ರಜನ್ ಅಣುಗಳು | ಉಂಟಾಗುವ ಅಣುಗಳು | ಕ್ರಿಯೆಯ ನಂತರ ಉಳಿಯುವುದು |
|---|---|---|---|
| 1 $N_2$ | 3 $H_2$ | ...(a)... | ಬಾಕಿ ಉಳಿಯುವುದಿಲ್ಲ |
| 2 $N_2$ | 7 $H_2$ | 2 $NH_3$ | ...(b)... |
| 4 $N_2$ | .....(c)..... | .....(d)..... | ಬಾಕಿ ಉಳಿಯುವುದಿಲ್ಲ |

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ರಾಸಾಯನಿಕ ಕ್ರಿಯೆಯಲ್ಲಿ ಪ್ರವರ್ತಕದ ಅಣುಗಳು ಮತ್ತು ಉತ್ಪನ್ನದ ಅಣುಗಳ ಸಂಖ್ಯೆಗಳ ನಡುವೆ ಒಂದು ನಿರ್ಧಿಷ್ಟ ನಿಷ್ಪತ್ತಿ ಇದೆ ಎಂದು ವಿವರಿಸಲು ಸಾಧ್ಯವಾಗುತ್ತದೆ.

4. $2H_2 + O_2 \rightarrow 2H_2O$

a) ಮೇಲೆ ನೀಡಲಾದ ರಾಸಾಯನಿಕ ಕ್ರಿಯೆಯಲ್ಲಿ ಪ್ರವರ್ತಕದ ಅಣುಗಳ ನಡುವೆ ಇರುವ ನಿಷ್ಪತ್ತಿ ಯಾವುದು? (1)

b) 1000 $H_2$ ಅಣುಗಳು ಪೂರ್ತಿಯಾಗಿ ವರ್ತಿಸಲು ಎಷ್ಟು $O_2$ ಅಣುಗಳು ಬೇಕು? (1)

c) 1000 $H_2$ ಅಣುಗಳು ಪೂರ್ತಿಯಾಗಿ ವರ್ತಿಸಿದರೆ ಎಷ್ಟು ನೀರಿನ ಅಣುಗಳು ಉಂಟಾಗುವುವು? (1)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಒಂದು GAM, ಒಂದು GMM ಇವುಗಳಲ್ಲಿ ಅಡಕವಾಗಿರುವ ಕಣಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದು.

5. ಕೆಳಗೆ ನೀಡಲಾದ ಪಟ್ಟಿಯನ್ನು ಪೂರ್ತಿಗೊಳಿಸಿರಿ. (ಇವುಗಳೆಲ್ಲ ದ್ವಿಪರಮಾಣುವಿಕ ಅಣುಗಳಾಗಿವೆ. ಪರಮಾಣು ದ್ರವ್ಯರಾಶಿ O = 16, N = 14, Cl = 35.5)

ಸ್ಕೋರ್ 2, ಸಮಯ 5 ನಿಮಿಷ

| GAM | ಪರಮಾಣುಗಳ ಸಂಖ್ಯೆ | GMM | ಅಣುಗಳ ಸಂಖ್ಯೆ |
|---|---|---|---|
| 16 g ಓಕ್ಸಿಜನ್ | $6.022 \times 10^{23}$ ಪರಮಾಣುಗಳು | 32 g ಓಕ್ಸಿಜನ್ | ..(a)..... ಅಣುಗಳು |
| 35.5g ಕ್ಲೋರಿನ್ | .......(b)ಪರಮಾಣುಗಳು | ..(c).... g ಕ್ಲೋರಿನ್ | $6.022{\times}10^{23}$ ಪರಮಾಣುಗಳು |
| ..(d)..... g ನೈಟ್ರಜನ್ | $6.022 \times 10^{23}$ ಪರಮಾಣುಗಳು | 28 g ನೈಟ್ರಜನ್ | $6.022{\times}10^{23}$ ಪರಮಾಣುಗಳು |

**ಕಲಿಕೆಯ ಸಾಧನೆ**

GMM ಪದಾರ್ಥದಲ್ಲಿ ಅಡಕವಾಗಿರುವ ಅಣುಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದು.

6. ಪದಾರ್ಥಗಳ 4 ಸ್ಯಾಂಪಲುಗಳನ್ನು ನೀಡಲಾಗಿದೆ.

| | | | |
|---|---|---|---|
| 68g $NH_3$ | 28g $N_2$ | 49g $H_2SO_4$ | 128g $O_2$ |

ಸೂಚನೆ : ಅಣುವಿಕ ದ್ರವ್ಯರಾಶಿ $NH_3 = 17$, $N_2 = 28$, $H_2SO_4 = 98$, $O_2 = 32$

a) ಯಾವ ಯಾವ ಸ್ಯಾಂಪಲ್ಲುಗಳಲ್ಲಿ ಅಣುಗಳ ಸಂಖ್ಯೆಯು ಸಮಾನವಾಗಿದೆ? (2)

b) ಇವುಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಅಣುಗಳು ಅಡಕವಾಗಿರುವುದು ಯಾವುದು? (1)

ಸ್ಕೋರ್ 3, ಸಮಯ 8 ನಿಮಿಷ

**ಕಲಿಕೆಯ ಸಾಧನೆ**

ಮೋಲ್ ಕಲ್ಪನೆಯ ಆಧಾರದಲ್ಲಿ ಅಣುಗಳ ಸಂಖ್ಯೆಯನ್ನು ಹೋಲಿಸಲು ಸಾಧ್ಯವಾಗುವುದು.

7. ಕೆಳಗೆ ನೀಡಲಾದವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ ಬರೆಯಿರಿ. ತಪ್ಪು ಇದ್ದವುಗಳನ್ನು ಸರಿಪಡಿಸಿ ಬರೆಯಿರಿ.

a) 1 ಮೋಲ್ ಹೈಡ್ರಜನ್ ಮತ್ತು 1 ಮೋಲ್ ಓಕ್ಸಿಜನ್‌ನಲ್ಲಿರುವ ಅಣುಗಳ ಸಂಖ್ಯೆಯು ಸಮಾನವಾಗಿದೆ. (1)

b) 2 ಮೋಲ್ ಕ್ಲೋರಿನ್‌ನಲ್ಲಿ $4 \times 6.022 \times 10^{23}$ ಕ್ಲೋರಿನ್ ಅಣುಗಳಿವೆ. (1)

c) ½ ಮೋಲ್ ನೈಟ್ರಜನ್ ಅನಿಲದ ದ್ರವ್ಯರಾಶಿ 14 g ಆಗಿದೆ. (1)

d) 0.5 ಮೋಲ್ ನೀರಿನ ದ್ರವ್ಯರಾಶಿ 9g ಆಗಿದೆ. ಇದರಲ್ಲಿ $6.022 \times 10^{23}$ $H_2O$ ಅಣುಗಳಿವೆ. (1)

(ಪರಮಾಣು ದ್ರವ್ಯರಾಶಿ H = 1, O = 16, Cl = 35.5, N = 14)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಒಂದು GAM, ಒಂದು GMM ಇವುಗಳಲ್ಲಿ ಅಡಕವಾಗಿರುವ ಕಣಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದು.

8. ಬಿಟ್ಟು ಹೋದವುಗಳನ್ನು ಪೂರ್ತಿಗೊಳಿಸಿರಿ. (3)




ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

STP ಯಲ್ಲಿ ಮೋಲಾರ್ ಗಾತ್ರವನ್ನು ವಿವರಿಸಲು ಮತ್ತು ಸರಳ ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ.

9. ಒಂದು ಸಿಲಿಂಡರಿನಲ್ಲಿ STP ಯಲ್ಲಿರುವ ನಿರ್ದಿಷ್ಟ $CO_2$ ಅನಿಲಕ್ಕೆ 67.2 ಲೀಟರ್ ಗಾತ್ರವಿದೆ.

a) ಇದರಲ್ಲಿ ಅಡಕವಾಗಿರುವ $CO_2$ ನ ದ್ರವ್ಯರಾಶಿ ಎಷ್ಟೆಂದು ಕಂಡುಹಿಡಿಯಿರಿ. (ಪರಮಾಣು ದ್ರವ್ಯರಾಶಿ C = 12, O = 16) (2)

b) ಸಿಲಿಂಡರಿನಲ್ಲಿರುವ $CO_2$ ಅಣುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ. (1)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

GMM, ಮೋಲಾರ್ ಗಾತ್ರ, ಅಣುಗಳ ಸಂಖ್ಯೆ ಇವುಗಳನ್ನು ತಿಳಿದುಕೊಳ್ಳುವುದು.

10. ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಪದಾರ್ಥ | GMM | ನೀಡಲಾದ ದ್ರವ್ಯರಾಶಿ | ಮೋಲ್‌ಗಳ ಸಂಖ್ಯೆ | ಅಣುಗಳ ಸಂಖ್ಯೆ | STP ಯಲ್ಲಿ ಗಾತ್ರ |
|---|---|---|---|---|---|
| $O_2$ (MM = 32) | 32 g | 64 g | (a) .......... | (b) .......... | $2 \times 22.4$L |
| $NH_3$ (MM = 17) | (c) .......... | (d) .......... | (e) .......... | $3 \times 6.022 \times 10^{23}$ | (f) .......... |

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

ಸಮತೋಲನಗೊಳಿಸಲ್ಪಟ್ಟ ರಾಸಾಯನಿಕ ಸಮೀಕರಣಗಳಲ್ಲಿ ಮೋಲ್ ಕಲ್ಪನೆಯನ್ನು ಉಪಯೋಗಿಸುವುದು.

11. $CH_4 + 2O_2 \rightarrow CO_2 + 2H_2O$

ಮೀಥೇನ್ ಅನಿಲವು ವಾಯುವಿನಲ್ಲಿ ಉರಿಯುವುದರ ಸಮತೋಲನಗೊಳಿಸಲ್ಪಟ್ಟ ಸಮೀಕರಣವನ್ನು ಮೇಲೆ ನೀಡಲಾಗಿದೆ.

a) ಸಮೀಕರಣವನ್ನು ಮೋಲ್ ನಿಷ್ಪತ್ತಿಯಲ್ಲಿ ಬರೆಯಿರಿ. (1)

b) 16 g $CH_4$ (1 ಮೋಲ್) ಸಂಪೂರ್ಣವಾಗಿ ಉರಿಯಲು ಎಷ್ಟು ಓಕ್ಸಿಜನ್ ಅಗತ್ಯವಿದೆ? (1)

c) 100 g $CH_4$ ಸಂಪೂರ್ಣವಾಗಿ ವಾಯುವಿನಲ್ಲಿ ಉರಿಯುವಾಗ $CO_2$ ನ ಅಳತೆಯನ್ನು ಕಂಡುಹಿಡಿಯಿರಿ.. (2)

ಸ್ಕೋರ್ 4, ಸಮಯ 8 ನಿಮಿಷ

**ಕಲಿಕೆಯ ಸಾಧನೆ**

ವಿಭಿನ್ನ ಮೋಲಾರ್ ದಟ್ಟಣೆಯಲ್ಲಿರುವ ದ್ರಾವಣಗಳ ತಯಾರಿಗೆ ಸಂಬಂಧಿಸಿದ ಗಣಿತ ಸಮಸ್ಯೆಗಳನ್ನು ಪರಿಹರಿಸುವುದು.

12. 45g ಗ್ಲುಕೋಸನ್ನು ಬೀಕರಿನಲ್ಲಿ ತೆಗೆದುಕೊಂಡು ನೀರು ಸೇರಿಸಿ 1L ಮಾಡಲಾಗುವುದು. (MM = 180)

a) ಈ ದ್ರಾವಣದ ಮೊಲಾರಿಟಿ ಲೆಕ್ಕಮಾಡಿರಿ. (1)

b) ಈ ದ್ರಾವಣಕ್ಕೆ ಮತ್ತಷ್ಟು ನೀರು ಸೇರಿಸಿ 2L ಮಾಡಲಾಗುವುದು. ದೊರೆಯುವ ಹೊಸ ದ್ರಾವಣದ ಮೊಲಾರಿಟಿ ಎಷ್ಟಾಗಿರಬಹುದು? (2)

c) ಇದೇ ಪ್ರಮಾಣದ (45 g) ಗ್ಲುಕೋಸ್ ಉಪಯೋಗಿಸಿ 1M ದ್ರಾವಣವನ್ನು ತಯಾರಿಸುವುದು ಹೇಗೆ ? (1)

ಸ್ಕೋರ್ 4, ಸಮಯ 7 ನಿಮಿಷ

**ಕಲಿಕೆಯ ಸಾಧನೆ**

STP ಯಲ್ಲಿ ಮೋಲಾರ್ ಗಾತ್ರ ಮತ್ತು ಅಣುಗಳ ಸಂಖ್ಯೆ ಎಂಬಿವುಗಳಿಗೆ ಸಂಬಂಧಿಸಿದ ಗಣಿತ ಸಮಸ್ಯೆಗಳನ್ನು ಪರಿಹರಿಸುವುದು.

13. ಸಮಾನ ಗಾತ್ರದಲ್ಲಿ STP ಯಲ್ಲಿರುವ ಎರಡು ಅನಿಲಗಳನ್ನು ಕೆಳಗೆ ನೀಡಲಾಗಿದೆ.

(ಪರಮಾಣು ದ್ರವ್ಯರಾಶಿ S = 32, O = 16, N = 14)

a) B ಯಲ್ಲಿ ಅಡಕವಾಗಿರುವ ಅನಿಲದ ದ್ರವ್ಯರಾಶಿ ಎಷ್ಟು? (2)




b) ಇದರಲ್ಲಿ ಅಡಕವಾಗಿರುವ ಅಣುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ. (1)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

STP ಯಲ್ಲಿ ಮೋಲಾರ್ ಗಾತ್ರ ಮತ್ತು ಅಣುಗಳ ಸಂಖ್ಯೆಗೆ ಸಂಬಂಧಿಸಿದ ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು.

14. ಒಂದು ರಾಸಾಯನಿಕ ಕ್ರಿಯೆಯ ಸಮತೋಲನಗೊಳಿಸಲ್ಪಟ್ಟ ಸಮೀಕರಣವನ್ನು (STP ಯಲ್ಲಿ) ಕೆಳಗೆ ನೀಡಲಾಗಿದೆ.

$2H_{2\,(g)} + O_{2\,(g)} \rightarrow 2H_2O_{\,(g)}$

a) STP ಯಲ್ಲಿರುವ 224 L ಹೈಡ್ರಜನ್ ಜೊತೆಗೆ ಸಂಪೂರ್ಣವಾಗಿ ವರ್ತಿಸಲು ಅಗತ್ಯವಾದ ಓಕ್ಸಿಜನ್‌ನ ಗಾತ್ರ ಎಷ್ಟು? (1)

b) ಈ ಕ್ರಿಯೆಯ ಪರಿಣಾಮವಾಗಿ ದೊರೆಯುವ ನೀರಿನ ದ್ರವ್ಯರಾಶಿಯನ್ನು ಕಂಡುಹಿಡಿಯಿರಿ. (2)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

STP ಯಲ್ಲಿ ಮೋಲಾರ್ ಗಾತ್ರ, ಅಣುಗಳ ಸಂಖ್ಯೆ, ದ್ರವ್ಯರಾಶಿ ಇವುಗಳ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು.

15. ಪಟ್ಟಿಯನ್ನು ಪೂರ್ತಿಗೊಳಿಸಿರಿ. (3)

| ಅನಿಲ | STP ಯಲ್ಲಿ ಗಾತ್ರ | ಮೋಲ್ | ದ್ರವ್ಯರಾಶಿ |
|---|---|---|---|
| $CO_2$ | ..........(a) | 3 | ..........(b) |
| $CH_4$ | 5.6L | ..........(c) | ..........(d) |
| $SO_2$ | ..........(e) | ..........(f) | 32 g |

ಸೂಚನೆ : (MM - $CO_2$ = 44, $CH_4$ = 16, $SO_2$ = 64)

ಸ್ಕೋರ್ 2, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

STP ಯಲ್ಲಿ ಮೋಲಾರ್ ಗಾತ್ರ, ಅಣುಗಳ ಸಂಖ್ಯೆ, ದ್ರವ್ಯರಾಶಿ ಇವುಗಳ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು.

16. ಕೆಳಗೆ ನೀಡಲಾದ ರಾಸಾಯನಿಕ ಸಮೀಕರಣವನ್ನು ಗಮನಿಸಿರಿ.

$2NO_{(g)} + O_{2(g)} \rightarrow 2NO_{2(g)}$

(ಸೂಚನೆ: $NO = 30$, $O_2 = 32$, $NO_2 = 46$)

a) STP ಯಲ್ಲಿರುವ 112 L ಓಕ್ಸಿಜನ್ ಸಂಪೂರ್ಣವಾಗಿ ವರ್ತಿಸಲು ಅಗತ್ಯವಿರುವ NO ನ ಮೋಲ್ ಸಂಖ್ಯೆಯನ್ನು ಕಂಡುಹಿಡಿಯಿರಿ. (1)

b) STP ಯಲ್ಲಿರುವ 112 L ಓಕ್ಸಿಜನ್ ಸಂಪೂರ್ಣವಾಗಿ ವರ್ತಿಸಿದಾಗ ಉಂಟಾಗುವ $NO_2$ ವಿನ ದ್ರವ್ಯರಾಶಿ ಎಷ್ಟು? (2)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

ಮೋಲ್, ಅಣುಗಳ ಸಂಖ್ಯೆ ಇವುಗಳ ನಡುವಿನ ಸಂಬಂಧವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು.

17. ಕ್ಯಾಲ್ಸಿಯಂ ಕಾರ್ಬೋನೇಟ್ ವಿಭಜನೆಗೊಳ್ಳುವುದರ ರಾಸಾಯನಿಕ ಸಮೀಕರಣವನ್ನು ನೀಡಲಾಗಿದೆ.

$CaCO_3 \rightarrow CaO + CO_2$

(ಸೂಚನೆ: MM: $CaCO_3$ - 100, CaO - 56, $CO_2$ - 44)

a) 224 g CaO ದೊರೆಯಲು ಅಗತ್ಯವಾದ $CaCO_3$ ಯ ದ್ರವ್ಯರಾಶಿ ಎಷ್ಟು? (1)

b) 224 g CaO ದೊರೆಯುವ ಕ್ರಿಯೆಯು ಜರಗುವಾಗ ಉಂಟಾಗುವ $CO_2$ ಅಣುಗಳ ಸಂಖ್ಯೆ ಎಷ್ಟು? (2)

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

ದ್ರವ್ಯರಾಶಿಯ ಆಧಾರದಲ್ಲಿ ಮೋಲ್ ಅಳತೆಯನ್ನು ವಿವರಿಸುವುದು.

18. 20 ಮೋಲ್ ಸಾಮಾನ್ಯ ಉಪ್ಪನ್ನು ತಲಾ 100 g ಅಳತೆಯ ಪೇಕೆಟುಗಳನ್ನಾಗಿ ಮಾಡಲು ಸೂಚಿಸಲಾಯಿತು.
(ಸೂಚನೆ: ಸಾಮಾನ್ಯ ಉಪ್ಪಿನ ಅಣುವಿಕ ದ್ರವ್ಯರಾಶಿ 58.5)

a) ಸಾಮಾನ್ಯ ಉಪ್ಪಿನ ಎಷ್ಟು ಪೇಕೆಟ್‌ಗಳನ್ನು ತಯಾರಿಸಬಹುದು? (2)

b) ಸಾಮಾನ್ಯ ಉಪ್ಪು ಬಾಕಿ ಉಳಿಯಬಹುದೆ? ಹಾಗಿದ್ದರೆ ಎಷ್ಟು? (1)

ಸ್ಕೋರ್ 3, ಸಮಯ 5 ನಿಮಿಷ

# 3

# ರಾಸಾಯನಿಕ ಕ್ರಿಯಾ ವೇಗ ಮತ್ತು ರಾಸಾಯನಿಕ ಸಮತೋಲನ

**ಕಲಿಕೆಯ ಸಾಧನೆ**

- ರಾಸಾಯನಿಕ ಕ್ರಿಯೆಯ ವೇಗವನ್ನು ಕಂಡುಹಿಡಿಯಲಿರುವ ವಿಧಾನವನ್ನು ತಿಳಿದುಕೊಳ್ಳುವುದು.

1. ಒಂದು ಪ್ರನಾಳದಲ್ಲಿ ದುರ್ಬಲ HCl ತೆಗೆದುಕೊಂಡು ಅದಕ್ಕೆ 5g ಸತುವನ್ನು ಸೇರಿಸಲಾಗುವುದು. 2 ನಿಮಿಷದ ನಂತರ Zn ಪೂರ್ತಿಯಾಗಿ ವರ್ತಿಸಿ ಮುಗಿದುದು ಕಂಡು ಬಂತು.

a) ಇಲ್ಲಿ ರಾಸಾಯನಿಕ ಕ್ರಿಯಾ ವೇಗವನ್ನು ಕಂಡುಹಿಡಿಯಲು ಯಾವ ವಿಧಾನವನ್ನು ಉಪಯೋಗಿಸಬಹುದು? (1)

b) ನೀಡಲಾದ ಮಾಹಿತಿಗಳನ್ನು ಉಪಯೋಗಿಸಿ ಈ ರಾಸಾಯನಿಕ ಕ್ರಿಯೆಯ ದರವನ್ನು ಕಂಡುಹಿಡಿಯಿರಿ. (2)

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಪ್ರಬಲತೆ ಮತ್ತು ರಾಸಾಯನಿಕ ಕ್ರಿಯೆಯ ವೇಗ ಇವುಗಳೊಳಗಿರುವ ಸಂಬಂಧವನ್ನು ತಿಳಿದುಕೊಳ್ಳುವುದು.

2.




a) ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯಾ ವೇಗ ಹೆಚ್ಚು? (1)

b) ಇದರಲ್ಲಿ ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರಿದ ಘಟಕ ಯಾವುದು? (1)

c) ರಾಸಾಯನಿಕ ಕ್ರಿಯಾ ವೇಗವು ಹೆಚ್ಚಲಿರುವ ಕಾರಣವನ್ನು ಕೊಲಿಶನ್ ಸಿದ್ಧಾಂತದ ಆಧಾರದಲ್ಲಿ ವಿವರಿಸಿರಿ. (2)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಒತ್ತಡ ಮತ್ತು ರಾಸಾಯನಿಕ ಕ್ರಿಯಾ ವೇಗಗಳ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು.

3. 100 atm ಒತ್ತಡದಲ್ಲಿರುವ ಎರಡು ಅನಿಲಗಳಾದ $A_2$ ಮತ್ತು $B_2$ ಸೇರಿ $AB_3$ ಎಂಬ ಅನಿಲವು ಉಂಟಾಗುವ ಕ್ರಿಯೆಯ ಸಮತೋಲನಗೊಳಿಸಲ್ಪಟ್ಟ ಸಮೀಕರಣವನ್ನು ನೀಡಲಾಗಿದೆ. (ಸಂಕೇತಗಳು ನಿಜವಾದವುಗಳಲ್ಲ)

$A_2 + 3B_2 \rightarrow 2AB_3$

a) ಒತ್ತಡವನ್ನು 100 atm ನಿಂದ 200 atm ಗೆ ಹೆಚ್ಚಿಸಿದರೆ, ಉತ್ಪನ್ನವನ್ನು ಉಂಟುಮಾಡುವ ಕ್ರಿಯೆಯ ವೇಗದಲ್ಲಿ ಯಾವ ಬದಲಾವಣೆ ಉಂಟಾಗಬಹುದು? (1)

b) ರಾಸಾಯನಿಕ ಕ್ರಿಯಾ ವೇಗದಲ್ಲಿ ಬದಲಾವಣೆ ಉಂಟಾಗಲಿರುವ ಕಾರಣವನ್ನು ಕೊಲಿಶನ್ ಸಿದ್ಧಾಂತದ ಆಧಾರದಲ್ಲಿ ವಿವರಿಸಿರಿ. (2)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಮೇಲ್ಮೈ ವಿಸ್ತೀರ್ಣ ಮತ್ತು ರಾಸಾಯನಿಕ ಕ್ರಿಯಾ ವೇಗಗಳ ಪರಸ್ಪರ ಸಂಬಂಧ

4. ಎರಡು ಪ್ರನಾಳಗಳಲ್ಲಿ ತಲಾ 5 ml ದುರ್ಬಲ HCl ತೆಗೆದುಕೊಳ್ಳಿರಿ. ಒಂದನೇ ಪ್ರನಾಳದಲ್ಲಿ 2 g ದ್ರವ್ಯರಾಶಿ ಇರುವ ಸತು (Zn) ವಿನ ತುಂಡು ಮತ್ತು ಎರಡನೇಯದರಲ್ಲಿ 2 g ಸತುವಿನ ಹುಡಿಯನ್ನು ಸೇರಿಸಲಾಗುವುದು.

a) ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯಾ ವೇಗ ಹೆಚ್ಚಿರುವುದಾಗಿ ಕಂಡುಬರುವುದು? (1)

b) ರಾಸಾಯನಿಕ ಕ್ರಿಯಾವೇಗ ಹೆಚ್ಚಲಿರುವ ಕಾರಣವೇನು? (2)

c) ದೈನಂದಿನ ಜೀವನದಲ್ಲಿ ಇದನ್ನು ಉಪಯೋಗಿಸಿಕೊಳ್ಳುವ ಒಂದು ಸಂದರ್ಭವನ್ನು ಬರೆಯಿರಿ. (1)

ಸ್ಕೋರ್ 4, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಸಮತೋಲನ ಸ್ಥಿತಿಯ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುವುದು.

5. $Fe(NO_3)_3 + 3KCNS \rightarrow \underset{(X)}{\ldots\ldots\ldots} + 3KNO_3$

a) X ಯಾವುದೆಂದು ಕಂಡುಹಿಡಿಯಿರಿ. ಇದರ ಬಣ್ಣ ಯಾವುದು ? (1)

b) ಕ್ರಿಯೆಯ ಪರಿಣಾಮವಾಗಿ ದೊರೆಯುವ ದ್ರಾವಣವನ್ನು ತೆಗೆದುಕೊಂಡು ದುರ್ಬಲಗೊಳಿಸಿದ ನಂತರ ಅದಕ್ಕೆ ಸ್ವಲ್ಪ KCNS ಸೇರಿಸಿದರೆ ಏನು ವೀಕ್ಷಿಸಬಹುದು? (1)

c) KCNS ನ ಬದಲು $KNO_3$ ಸೇರಿಸಿದರೆ ಉಂಟಾಗುವ ಬದಲಾವಣೆಗಳೇನು? (1)

d) b, c ಎಂಬೀ ಕ್ರಿಯೆಗಳಿಂದ ಯಾವ ನಿಗಮನಕ್ಕೆ ತಲಪಬಹುದು? (1)

ಸ್ಕೋರ್ 4, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ರಾಸಾಯನಿಕ ಸಮತೋಲನಕ್ಕೆ ಸಂಬಂಧಿಸಿದ ಗ್ರಾಫನ್ನು ವಿಶ್ಲೇಷಿಸುವುದು.

6. $N_2 + 3H_2 \rightleftharpoons 2NH_3$ ಎಂಬ ಕ್ರಿಯೆಯು ಪ್ರಗತಿಯನ್ನು ಪ್ರದರ್ಶಿಸುವ ಗ್ರಾಫನ್ನು ಕೆಳಗೆ ನೀಡಲಾಗಿದೆ.



a) B, C ಇವುಗಳು ಯಾವ ಯಾವ ಕ್ರಿಯೆಗಳನ್ನು ಸೂಚಿಸುತ್ತವೆ? (1)

b) A ಎಂಬ ಹಂತದ ವೈಶಿಷ್ಟ್ಯ ಯಾವುದು? (1)

c) A ಎಂಬ ಹಂತದ ನಂತರ ಸಮಯ ಕಳೆದಂತೆ ಪ್ರಬಲತೆಯಲ್ಲಿ ಯಾವುದಾದರೂ ಬದಲಾವಣೆ ಉಂಟಾಗುತ್ತದೆಯೆ? ವಿವರಿಸಿರಿ. (2)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಉಷ್ಣತೆ ಮತ್ತು ರಾಸಾಯನಿಕ ಕ್ರಿಯಾ ವೇಗಗಳ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು.

7. ಎರಡು ಪ್ರನಾಳಗಳಲ್ಲಿ ಒಂದರಲ್ಲಿ ತಣ್ಣೀರು ಮತ್ತು ಇನ್ನೊಂದರಲ್ಲಿ ಬಿಸಿನೀರನ್ನು ತೆಗೆದುಕೊಳ್ಳಲಾಗುವುದು. ಸಮಾಲ ಗಾತ್ರದ ಮೆಗ್ನೀಶಿಯಂ ರಿಬ್ಬನನ್ನು ಎರಡೂ ಪ್ರನಾಳಗಳಿಗೆ ಸೇರಿಸಲಾಗುವುದು.

a) ಯಾವ ಪ್ರನಾಳದಲ್ಲಿ ಹೆಚ್ಚು ಹೈಡ್ರಜನ್ ಉಂಟಾಗುವುದು? (1)

b) ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರಿದ ಘಟಕ ಯಾವುದು? ಈ ಘಟಕವು ರಾಸಾಯನಿಕ ಕ್ರಿಯಾ ವೇಗವನ್ನು ಹೇಗೆ ಹೆಚ್ಚಿಸುವುದು? ವಿವರಿಸಿರಿ. (3)

ಸ್ಕೋರ್ 4, ಸಮಯ 7 ನಿಮಿಷ

**ಕಲಿಕೆಯ ಸಾಧನೆ**

- ಲಿ ಶೆಟೆಲಿಯರ್ ತತ್ವವನ್ನು ಉಪಯೋಗಿಸಿ ರಾಸಾಯನಿಕ ಸಮತೋಲನವನ್ನು ವಿವರಿಸಲು ಸಾಧ್ಯವಾಗುವುದು.

8. ಅಮೋನಿಯಾದ ಕೈಗಾರಿಕಾ ಮಟ್ಟದ ತಯಾರಿಯ ಸಮೀಕರಣವನ್ನು ಕೆಳಗೆ ನೀಡಲಾಗಿದೆ.

$N_2 + 3H_2 \rightleftharpoons 2NH_3 +$ ಉಷ್ಣ

a) ಹೆಚ್ಚು $NH_3$ ದೊರೆಯಲು ಸಹಕರಿಸುವ ವಿಧಾನಗಳನ್ನು ಸೂಚಿಸಿರಿ. (2)

b) ಪ್ರತಿಯೊಂದಕ್ಕೂ ಕಾರಣವನ್ನು ಕಂಡುಹಿಡಿಯಿರಿ. (2)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಲಿ ಶೆಟಲಿಯರ್ ತತ್ವವನ್ನು ಉಪಯೋಗಿಸಿ ರಾಸಾಯನಿಕ ಸಮತೋಲನವನ್ನು ವಿವರಿಸಲು ಸಾಧ್ಯವಾಗುವುದು.

9. $H_{2\,(g)} + I_{2\,(g)} \rightleftharpoons 2HI_{(g)} +$ ಉಷ್ಣ

ಈ ಕ್ರಿಯೆಯಲ್ಲಿ ಕೆಳಗೆ ನೀಡಲಾದ ಸಂದರ್ಭಗಳು ಹೇಗೆ ಪ್ರಭಾವ ಬೀರುವುದೆಂದು ಬರೆಯಿರಿ.

a) $H_2$ ವಿನ ದಟ್ಟಣೆಯನ್ನು ಹೆಚ್ಚಿಸುವುದು. (1)

b) ಒತ್ತಡವನ್ನು ಹೆಚ್ಚಿಸುವುದು. (1)

c) ಉಷ್ಣವನ್ನು ಹೆಚ್ಚಿಸಿವುದು. (1)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಲಿ ಶೆಟಲಿಯರ್ ತತ್ವವನ್ನು ಉಪಯೋಗಿಸಿ ರಾಸಾಯನಿಕ ಸಮತೋಲನವನ್ನು ವಿವರಿಸಲು ಸಾಧ್ಯವಾಗುವುದು.

10. ಸಲ್ಫೂರಿಕ್ ಆಮ್ಲದ ಕೈಗಾರಿಕಾ ಪ್ರಮಾಣದ ತಯಾರಿಯಲ್ಲಿ $SO_3$ ಯನ್ನು ಉತ್ಪಾದಿಸುವ ಕ್ರಿಯೆಯನ್ನು ಕೆಳಗೆ ನೀಡಲಾಗಿದೆ.

$2SO_2 + O_2 \rightleftharpoons 2SO_3 + \text{Heat}$

a) ಹೆಚ್ಚಿನ ಪ್ರಮಾಣದಲ್ಲಿ $SO_3$ ದೊರೆಯಲು ಪ್ರವರ್ತಕವಾದ $O_2$ ವಿನ ಅಳತೆಯಲ್ಲಿ ಯಾವ ಬದಲಾವಣೆ ಮಾಡಬೇಕು? (1)

b) ಇದಕ್ಕೆ ಸಂಬಂಧಿಸಿದ ನಿಯಮ/ತತ್ವ ಯಾವುದು? ವಿವರಿಸಿರಿ. (1)

c) $O_2$ ವಿನ ಅಳತೆಯಲ್ಲಿ ಮಾಡಲಾದ ಬದಲಾವಣೆಯಿಂದಾಗಿ ಹೆಚ್ಚು $SO_3$ ದೊರೆಯಲು ಕಾರಣವೇನು? ಮೇಲೆ ಹೇಳಿದ ನಿಯಮದ ಆಧಾರದಲ್ಲಿ $SO_3$ ದೊರೆಯಲು ಕಾರಣವೇನು? ಮೇಲೆ ಹೇಳಿದ ನಿಯಮದ ಆಧಾರದಲ್ಲಿ ವಿವರಿಸಿರಿ. (1)

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯಲ್ಲಿ ಪ್ರೇರಕದ ಪ್ರಭಾವ

11. ಸಲ್ಫೂರಿಕ್ ಆಮ್ಲದ ಕೈಗಾರಿಕಾ ಮಟ್ಟದ ತಯಾರಿಯಲ್ಲಿ ಒಂದು ಹಂತದ ರಾಸಾಯನಿಕ ಸಮೀಕರಣವನ್ನು ನೀಡಲಾಗಿದೆ.

$2SO_2 + O_2 \rightleftharpoons 2SO_3$ + ಉಷ್ಣ

a) ಈ ರಾಸಾಯನಿಕ ಕ್ರಿಯೆಯಲ್ಲಿ ಪ್ರೇರಕ ಯಾವುದು? (1)

b) ಒಂದು ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯಲ್ಲಿ ಪ್ರೇರಕದ ಪ್ರಭಾವವೇನು? (1)

ಸ್ಕೋರ್ 2, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ರಾಸಾಯನಿಕ ಕ್ರಿಯಾ ವೇಗದಲ್ಲಿ ಪ್ರೇರಕದ ಪ್ರಭಾವವನ್ನು ತಿಳಿದುಕೊಳ್ಳುವುದು.

12. $2H_2O_2 \xrightarrow{MnO_2} 2H_2O + O_2$

a) ರಾಸಾಯನಿಕ ಕ್ರಿಯೆಯು ಪೂರ್ತಿಯಾದ ನಂತರ ಪ್ರನಾಳದಲ್ಲಿ ಬದಲಾವಣೆ ಇಲ್ಲದೆ ಬಾಕಿ ಉಳಿಯುವ ಪದಾರ್ಥ ಯಾವುದು? (1)

b) ಈ ಕ್ರಿಯೆಯಲ್ಲಿ ಪ್ರಸ್ತುತ ಪದಾರ್ಥದ ಕೆಲಸವೇನು? (1)

---

ಸ್ಕೋರ್ 2, ಸಮಯ 7 ನಿಮಿಷ

**ಕಲಿಕೆಯ ಸಾಧನೆ**

- ಲಿ ಶೆಟೆಲಿಯರ್ ತತ್ವವನ್ನು ಉಪಯೋಗಿಸಿ ಅಧಿಕ ಪ್ರಮಾಣದ ಉತ್ಪನ್ನವನ್ನು ಕಂಡುಹಿಡಿಯಲಿರುವ ವಿಧಾನವನ್ನು ಕಂಡುಹಿಡಿಯುವುದು.

13. ಅಮೋನಿಯಾದ ಕೈಗಾರಿಕಾ ತಯಾರಿಯ ರಾಸಾಯನಿಕ ಸಮೀಕರಣವನ್ನು ನೀಡಲಾಗಿದೆ.

$N_2 + 3H_2 \rightleftharpoons 2NH_3$ + ಉಷ್ಣ

a) ಹೆಚ್ಚು ಅಮೋನಿಯಾ ದೊರೆಯಲು ಲಿ ಶೆಟೆಲಿಯರ್ ತತ್ವವನ್ನು ಅನುಸರಿಸಿ ಉಷ್ಣತೆಯನ್ನು ಕಡಿಮೆ ಮಾಡಬೇಕು ಯಾಕೆ? (2)

b) ಈ ರಾಸಾಯನಿಕ ಕ್ರಿಯೆಯಲ್ಲಿ ಆದರ್ಶ ಉಷ್ಣತೆಯನ್ನು ಉಪಯೋಗಿಸಿಕೊಳ್ಳಲು ಕಾರಣವೇನು? (2)

ಸ್ಕೋರ್ 4, ಸಮಯ 5 ನಿಮಿಷ

### ಕಲಿಕೆಯ ಸಾಧನೆ

- ಲಿ ಶೆಟೆಲಿಯರ್ ತತ್ವವನ್ನು ಉಪಯೋಗಿಸಿ ಸಮತೋಲನ ಸ್ಥಿತಿಗೆ ತಲಪುವ ರಾಸಾಯನಿಕ ಕ್ರಿಯೆಯಲ್ಲಿ ಅಧಿಕ ಉತ್ಪನ್ನವನ್ನು ತಯಾರಿಸುವ ವಿಧಾನಗಳನ್ನು ಕಂಡುಹಿಡಿಯುವುದು.

14. ಕೆಳಗೆ ನೀಡಲಾದ ರಾಸಾಯನಿಕ ಸಮೀಕರಣಗಳನ್ನು ಪರಿಶೀಲಿಸಿ ಅದರ ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

i) $NH_4Cl_{(s)} \rightleftharpoons NH_{3\,(g)} + HCl_{(g)}$

ii) $H_{2\,(g)} \rightleftharpoons I_{2\,(g)} + 2HI_{(g)}$

iii) $N_{2\,(g)} \rightleftharpoons 3H_{2\,(g)} + 2NH_{3\,(g)}$

a) ಇವುಗಳಲ್ಲಿ ಒತ್ತಡವು ಪ್ರಭಾವ ಬೀರುವ ರಾಸಾಯನಿಕ ಕ್ರಿಯೆ ಯಾವುದು? ಇದಕ್ಕಿರುವ ಕಾರಣಗಳು ಯಾವುವು? (2)

b) ನೀವು ಕಂಡುಹಿಡಿದ ಕ್ರಿಯೆಯಲ್ಲಿ ಒತ್ತಡದ ಹೆಚ್ಚಳವು ಯಾವ ರೀತಿಯಲ್ಲಿ ಪ್ರಭಾವ ಬೀರುತ್ತದೆ? (2)

ಸ್ಕೋರ್ 4, ಸಮಯ 6 ನಿಮಿಷ

### ಕಲಿಕೆಯ ಸಾಧನೆ

- ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯಲ್ಲಿ ಪ್ರೇರಕದ ಪ್ರಭಾವವನ್ನು ತಿಳಿದುಕೊಳ್ಳುವುದು.

15. ಪ್ರೇರಕಗಳು ರಾಸಾಯನಿಕ ಕ್ರಿಯಾ ವೇಗದ ಮೇಲೆ ಪ್ರಭಾವ ಬೀರುವ ಪದಾರ್ಥಗಳಲ್ಲವೇ. ಒಂದು ಇಕ್ಕಡೆಗಲ್ಲಿ ಜರಗುವ ರಾಸಾಯನಿಕ ಕ್ರಿಯೆಯಲ್ಲಿ ಪ್ರೇರಕದ ಪ್ರಭಾವವೇನೆಂದು ವಿವರಿಸಿರಿ. (2)

ಸ್ಕೋರ್ 2, ಸಮಯ 5 ನಿಮಿಷ

### ಕಲಿಕೆಯ ಸಾಧನೆ

- ಲಿ ಶೆಟೆಲಿಯರ್ ತತ್ವವನ್ನು ಉಪಯೋಗಿಸಿ ಸಮತೋಲನ ಸ್ಥಿತಿಯಲ್ಲಿರುವ ಒಂದು ರಾಸಾಯನಿಕ ಕ್ರಿಯೆಯಲ್ಲಿ ಉಷ್ಣತೆ, ಒತ್ತಡ ಇವುಗಳ ಸ್ವಭಾವವನ್ನು ವಿವರಿಸುತ್ತಾರೆ.

16. ಸಮತೋಲನ ಸ್ಥಿತಿಯಲ್ಲಿರುವ ಒಂದು ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯ ವೈಶಿಷ್ಟ್ಯಗಳನ್ನು ಕೆಳಗೆ ನೀಡಲಾಗಿದೆ.

- ಪ್ರವರ್ತಕಗಳು ಮತ್ತು ಉತ್ಪನ್ನಗಳು ಅನಿಲಗಳಾಗಿವೆ.
- ಉಷ್ಣತೆಯನ್ನು ಹೆಚ್ಚಿಸಿದರೆ ಉತ್ಪನ್ನವು ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುವುದು.
- ಒತ್ತಡವನ್ನು ಹೆಚ್ಚಿಸಿದಾಗ ಯಾವುದೇ ಬದಲಾವಣೆ ಉಂಟಾಗುವುದಿಲ್ಲ.

ಇದರ ಆಧಾರದಲ್ಲಿ ರಾಸಾಯನಿಕ ಕ್ರಿಯೆಯ ಬಗ್ಗೆ ರೂಪಿಸಬಹುದಾದ ಎರಡು ನಿಯಮಗಳನ್ನು ಬರೆಯಿರಿ. (2)

ಸ್ಕೋರ್ 2, ಸಮಯ 4 ನಿಮಿಷ

## ಕಲಿಕೆಯ ಸಾಧನೆ

- ಸಮತೋಲನ ಸ್ಥಿತಿಯಲ್ಲಿರುವ ರಾಸಾಯನಿಕ ಕ್ರಿಯೆಯ ಮೇಲೆ ಪ್ರಭಾವ ಬೀರುವ ಘಟಕಗಳನ್ನು ವಿವರಿಸುವುದು.

17. $A + B +$ ಉಷ್ಣ $\underset{}{\overset{473K}{\rightleftharpoons}}$ $2C + D$

ಇಕ್ಕಡೆಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯು ಸಮತೋಲನ ಸ್ಥಿತಿಯಲ್ಲಿದೆ. ಕೆಳಗೆ ನೀಡಲಾದ ಸಂದರ್ಭಗಳಲ್ಲಿ ಉತ್ಪನ್ನದ ಅಳತೆಯಲ್ಲಿ ಯಾವ ಬದಲಾವಣೆ ಉಂಟಾಗುವುದು?

a) C ಯನ್ನು ಹೊರತೆಗೆಯುವುದು.

b) B ಯನ್ನು ಇನ್ನಷ್ಟು ಹೆಚ್ಚಿಸುವುದು.

c) ಉಷ್ಣತೆಯನ್ನು 600 K ಗೆ ಹೆಚ್ಚಿಸಲಾಗುವುದು.

d) ಸೂಕ್ತವಾದ ಒಂದು ಪ್ರೇರಕವನ್ನು ಸೇರಿಸುವುದು.

ಸ್ಕೋರ್ 2, ಸಮಯ 4 ನಿಮಿಷ

# 4

# ಕ್ರಿಯಾಶೀಲ ಶ್ರೇಣಿ ಮತ್ತು ವಿದ್ಯುತ್ ರಸಾಯನ ಶಾಸ್ತ್ರ

**ಕಲಿಕೆಯ ಸಾಧನೆ**

- ಲೋಹಗಳಿಗೆ ನೀರಿನೊಂದಿಗಿರುವ ವರ್ತನೆಯನ್ನು ಹೋಲಿಸಲು ಸಾಧ್ಯವಾಗುತ್ತದೆ.

1. ಮೂರು ಪ್ರನಾಳಗಳಲ್ಲಿ 5 ml ನಂತೆ ನೀರು ತೆಗೆದುಕೊಳ್ಳಲಾಗುವುದು. ಸಮಾನ ದ್ರವ್ಯರಾಶಿ ಇರುವ ತಾಮ್ರ, ಸೋಡಿಯಂ, ಮೆಗ್ನೀಶಿಯಂ ಎಂಬಿವುಗಳನ್ನು ಬೇರೆ ಬೇರೆ ಪ್ರನಾಳಗಳಲ್ಲಿ ಇರಿಸಲಾಗುವುದು. ಮೆಗ್ನೀಶಿಯಂ, ತಾಮ್ರಗಳನ್ನು ಇರಿಸಿದ ಪ್ರನಾಳವನ್ನು ಬಿಸಿ ಮಾಡಲಾಗುವುದು.

a) ಬಿಸಿ ಮಾಡಿದ ಪ್ರನಾಳವನ್ನು ನಿರೀಕ್ಷಣೆ ಮಾಡಿ ಬರೆಯಿರಿ. (1)

b) ಸೋಡಿಯಂ ಇರಿಸಿದ ಪ್ರನಾಳದಲ್ಲಿ ಜರಗುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. (1)

c) ಈ ಲೋಹಗಳನ್ನು ಅವುಗಳ ಕ್ರಿಯಾ ಸಾಮರ್ಥ್ಯದ ಅವರೋಹಣ ಕ್ರಮದಲ್ಲಿ ಬರೆಯಿರಿ. (1)

ಸ್ಕೋರ್ 2, ಸಮಯ 4 ನಿಮಿಷ

---

**ಕಲಿಕೆಯ ಸಾಧನೆ**

- ಲೋಹಗಳಿಗೆ ನೀರಿನೊಂದಿಗಿರುವ ವರ್ತನೆಯನ್ನು ಹೋಲಿಸಲು ಸಾಧ್ಯವಾಗುವುದು.

2.

a) ತಾಮ್ರ, ಅಲ್ಯುಮಿನಿಯಂ, ಚಿನ್ನ ಎಂಬಿವುಗಳಲ್ಲಿ ಅತ್ಯಧಿಕ ವೇಗದಲ್ಲಿ ಹೊಳಪು ನಷ್ಟವಾಗುವ ಲೋಹ ಯಾವುದು? ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. (1)

b) ಸೋಡಿಯಂನ್ನು ಸೀಮೆ ಎಣ್ಣೆಯಲ್ಲಿ ಇರಿಸಿ ಕಾಪಾಡಲಾಗುವುದು. ಕಾರಣವೇನು? (2)

ಸ್ಕೋರ್ 3, ಸಮಯ 5 ನಿಮಿಷ

---

**ಕಲಿಕೆಯ ಸಾಧನೆ**

- ಲೋಹಗಳು ಮತ್ತು ದುರ್ಬಲಗೊಳಿಸಿದ ಹೈಡ್ರೋಕ್ಲೋರಿಕ್ ಆಮ್ಲಗಳ ಪರಸ್ಪರ ವರ್ತನೆಯನ್ನು ತಿಳಿದುಕೊಳ್ಳುತ್ತಾರೆ.

3. Mg, Zn, Cu ಎಂಬೀ ಲೋಹಗಳಿಗೆ ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲದ ಜೊತೆಗಿನ ವರ್ತನೆಯನ್ನು ಹೋಲಿಸಲು ಒಂದು ಪ್ರಯೋಗದ ತಯಾರಿಯನ್ನು ಮಾಡಲಾಗುವುದು.

a) ಪ್ರಯೋಗದ ವಿಧಾನ, ನಿರೀಕ್ಷಣೆ ಎಂಬಿವುಗಳನ್ನು ಬರೆಯಿರಿ. (3)

b) ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸತು ಪರಸ್ಪರ ವರ್ತಿಸಿದಾಗ ಉಂಟಾಗುವ ಅನಿಲ ಯಾವುದು? (1)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ಆದೇಶ ರಾಸಾಯನಿಕ ಕ್ರಿಯೆಯ ಕುರಿತಾದ ತಿಳುವಳಿಕೆಯನ್ನು ಗಳಿಸುತ್ತಾರೆ.

4.




a) ಕಬ್ಬಿಣದ ದಂಡ ಮತ್ತು $CuSO_4$ ದ್ರಾವಣದ ಬಣ್ಣದಲ್ಲಿ ಉಂಟಾಗುವ ವ್ಯತ್ಯಾಸಗಳೇನು? (1)

b) ಉತ್ಕರ್ಷಣೆ ಮತ್ತು ಅಪಕರ್ಷಣೆ ಕ್ರಿಯೆಗಳ ಸಮೀಕರಣಗಳನ್ನು ಬರೆಯಿರಿ. (1)

c) ಕಬ್ಬಿಣದ ದಂಡಕ್ಕೆ ಬದಲಾಗಿ ಬೆಳ್ಳಿಯ ದಂಡವನ್ನು ಉಪಯೋಗಿಸಿದರೆ ಯಾವ ಬದಲಾವಣೆ ಉಂಟಾಗುವುದು? ಕಾರಣವೇನು? (2)

ಸ್ಕೋರ್ 4 ಸಮಯ 10 ನಿಮಿಷ

## ಕಲಿಕೆಯ ಸಾಧನೆ

- ಸೋಡಿಯಂ ಮತ್ತು ನೀರು ಇವುಗಳ ವರ್ತನೆಯನ್ನು ತಿಳಿದುಕೊಳ್ಳುವುದು.

5. ಸೋಡಿಯಂ ನೀರಿನ ಜೊತೆಗೆ ವರ್ತಿಸುತ್ತದೆ.

a) ದೊರೆಯುವ ಅನಿಲ ಯಾವುದು? (1)

b) ಈ ನೀರಿಗೆ ಎರಡು ಬಿಂದು ಫಿನೋಫ್ತಲಿನ್ ಸೇರಿಸಿದರೆ ದ್ರಾವಣದಲ್ಲಿ ಉಂಟಾಗುವ ಬಣ್ಣ ವ್ಯತ್ಯಾಸ ಯಾವುದು ? ಕಾರಣವೇನು? (2)

ಸ್ಕೋರ್ 3, ಸಮಯ 6 ನಿಮಿಷ

## ಕಲಿಕೆಯ ಸಾಧನೆ

- ಗೆಲ್ವನಿಕ್ ಸೆಲ್‌ಗಳನ್ನು ತಯಾರಿಸಲು ಮತ್ತು ಇಲೆಕ್ಟ್ರೋಡ್‌ಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯನ್ನು ಬರೆಯಲು ಸಾಧ್ಯವಾಗುತ್ತದೆ.

6. ಮೂರು ಗೆಲ್ವನಿಕ್ ಸೆಲ್‌ಗಳನ್ನು ನೀಡಲಾಗಿದೆ.



a) ಇವುಗಳಲ್ಲಿ ಅತ್ಯಧಿಕ ಕ್ರಿಯಾಶೀಲತೆ ಹೊಂದಿರುವ ಲೋಹ ಮತ್ತು ಕಡಿಮೆ ಕ್ರಿಯಾಶೀಲತೆಯನ್ನು ಹೊಂದಿರುವ ಲೋಹವನ್ನು ಕಂಡುಹಿಡಿಯಿರಿ. (1)

b) ಸೆಲ್ I ರಲ್ಲಿ ಉತ್ಕರ್ಷಣೆ ಜರಗುವ ಇಲೆಕ್ಟ್ರೋಡ್ ಯಾವುದು? ಕಾರಣವೇನು? (2)

c) ಸೆಲ್ III ರಲ್ಲಿ ರಿಡೋಕ್ಸ್ ಕ್ರಿಯೆಯ ಸಮೀಕರಣವನ್ನು ಬರೆಯಿರಿ. (1)
(A ಮತ್ತು C ಯ ಸಂಯೋಜಕತೆ 2)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ಗೇಲ್ವನಿಕ್ ಸೆಲ್ ತಯಾರಿಸಲಿರುವ ಆಶಯವನ್ನು ತಿಳಿದುಕೊಳ್ಳುವುದು.

7. ಕೆಲವು ಲೋಹಗಳು ಮತ್ತು ಲವಣ ದ್ರಾವಣಗಳನ್ನು ನೀಡಲಾಗಿದೆ.

($Cu$, $Zn$, $Ag$, $ZnSO_4$, $AgNO_3$, $MgCl_2$)

a) ಇವುಗಳನ್ನು ಉಪಯೋಗಿಸಿ ತಯಾರಿಸಬಹುದಾದ ಒಂದು ಗೇಲ್ವನಿಕ್ ಸೆಲ್ಲನ್ನು ಚಿತ್ರಿಸಿರಿ. (2)

b) ಈ ಸೆಲ್ಲಿನ ಏನೋಡ್ ಮತ್ತು ಕೇಥೋಡನ್ನು ಕಂಡುಹಿಡಿದು ಕೇಥೋಡಿನಲ್ಲಿ ಜರಗುವ ಕ್ರಿಯೆಯ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (2)

ಸ್ಕೋರ್ 4, ಸಮಯ 10 ನಿಮಿಷ.

## ಕಲಿಕೆಯ ಸಾಧನೆ

- ಲೋಹಗಳ ರಾಸಾಯನಿಕ ಕ್ರಿಯೆ ಮತ್ತು ಸ್ವಭಾವಗಳನ್ನು ತಿಳಿದುಕೊಳ್ಳುವುದು.

8. ಕಾರಣವನ್ನು ಕಂಡುಹಿಡಿದು ಬರೆಯಿರಿ.

a) ನೀರನ್ನು ಕುದಿಸಲು ಉಪಯೋಗಿಸುವ ಬೋಯ್ಲರ್‌ಗಳನ್ನು ತಯಾರಿಸಲು ಕಬ್ಬಿಣದ ಪಾತ್ರೆಗಕಳನ್ನು ಉಪಯೋಗಿಸುವುದಿಲ್ಲ. (1)

b) ಕೋಪರ್ ಸಲ್ಫೇಟ್ ದ್ರಾವಣವನ್ನು ಕಬ್ಬಿಣದ ಪಾತ್ರೆಯಲ್ಲಿ ಇರಿಸುವುದಿಲ್ಲ. (1)

ಸ್ಕೋರ್ 2, ಸಮಯ 6 ನಿಮಿಷ

## ಕಲಿಕೆಯ ಸಾಧನೆ

- ವಿದ್ಯುತ್ ವಿಶ್ಲೇಷಣಾ ಸೆಲ್ಲಿನಲ್ಲಿ ಜರಗುವ ಕ್ರಿಯೆಗಳನ್ನು ತಿಳಿದುಕೊಳ್ಳುತ್ತಾರೆ.

9. ನೀಡಲಾದ ವಿದ್ಯುತ್ ವಿಶ್ಲೇಷಣಾ ಸೆಲ್ಲನ್ನು ಗಮನಿಸಿರಿ.



a) ಪೊಸಿಟಿವ್ ಇಲೆಕ್ಟ್ರೋಡ್‌ನಲ್ಲಿ ಉಂಟಾಗುವ ಅನಿಲ ಯಾವುದು? (1)

b) ಈ ಸೆಲ್ಲಿನಲ್ಲಿ ಜರಗುವ ಉತ್ಕರ್ಷಣೆ ಮತ್ತು ಅಪಕರ್ಷಣೆ ಕ್ರಿಯೆಗಳ ಸಮೀಕರಣವನ್ನು ಬರೆಯಿರಿ. (1)

c) ಗೆಲ್ವನಿಕ್ ಸೆಲ್ ಮತ್ತು ವಿದ್ಯುತ್ ವಿಶ್ಲೇಷಣಾ ಸೆಲ್‌ಗಳಲ್ಲಿ ಜರಗುವ ಚೈತನ್ಯದ ಬದಲಾವಣೆಗಳ ವ್ಯತ್ಯಾಸವೇನು? (2)

ಸ್ಕೋರ್ 4, ಸಮಯ 10 ನಿಮಿಷ

## ಕಲಿಕೆಯ ಸಾಧನೆ

- ದ್ರಾವಣಗಳ ವಿದ್ಯುತ್ ವಿಶ್ಲೇಷಣೆ – ಏನೋಡ್ ಮತ್ತು ಕೇಥೋಡ್‌ಗಳಲ್ಲಿ ಸ್ವತಂತ್ರವಾಗುವ ಪದಾರ್ಥಗಳನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ.

10. ಕೆಳಗೆ ನೀಡಲಾದ ಪಟ್ಟಿಯಲ್ಲಿರುವ ಇಲೆಕ್ಟ್ರೋ ಲೈಟುಗಳನ್ನು ವಿದ್ಯುತ್ ವಿಶ್ಲೇಷಣೆ ಮಾಡಲಾಗುವುದು.

a) ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಇಲೆಕ್ಟ್ರೋಲೈಟ್ | ಏನೋಡ್‌ನಲ್ಲಿ ಸಂಗ್ರಹಿಸಲ್ಪಡುವ/ ಸ್ವತಂತ್ರಗೊಳಿಸಲ್ಪಡುವ ಪದಾರ್ಥ | ಕೇಥೋಡ್‌ನಲ್ಲಿ ಸಂಗ್ರಹಿಸಲ್ಪಡುವ/ ಸ್ವತಂತ್ರಗೊಳಿಸಲ್ಪಡುವ ಪದಾರ್ಥ |
|---|---|---|
| i) ಆಮ್ಲ ಮಿಶ್ರಿತ ನೀರು | ಓಕ್ಸಿಜನ್ | (i) ................ |
| ii) ದ್ರವೀಕೃತ ಸೋಡಿಯಂ ಕ್ಲೋರೈಡ್ | (ii) ................ | ಸೋಡಿಯಂ |
| iii) ಸೋಡಿಯಂ ಕ್ಲೋರೈಡ್‌ನ ಜಲೀಯ ದ್ರಾವಣ | (iii) ................ | (iv) ................ |

b) ವಿದ್ಯುತ್ ವಿಶ್ಲೇಷಣೆಯನ್ನು ಉಪಯೋಗಿಸುವ ಎರಡು ಕ್ಷೇತ್ರಗಳನ್ನು ಪಟ್ಟಿಮಾಡಿರಿ. (2)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ಗೆಲ್ವನಿಕ್ ಸೆಲ್ಲನ್ನು ಚಿತ್ರಿಸಲು ಸಾಧ್ಯವಾಗುತ್ತದೆ.

11. ಕ್ರಿಯಾಶೀಲ ಶ್ರೇಣಿಯಲ್ಲಿ ಕಬ್ಬಿಣವು ಸತುವಿನ ಕೆಳಗಿದೆ. ಇವುಗಳು ಸೇರಿ ಉಂಟಾಗುವ ಗೆಲ್ವನಿಕ್ ಸೆಲ್ಲನ್ನು ನೀಡಲಾಗಿದೆ. ಚಿತ್ರದಲ್ಲಿರುವ ತಪ್ಪುಗಳನ್ನು ಸರಿಪಡಿಸಿ ಸರಿಯಾದ ಚಿತ್ರವನ್ನು ಬಿಡಿಸಿರಿ.




ಸ್ಕೋರ್ 2, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳನ್ನು ಗುರುತಿಸಿ ಅವುಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ವಿವರಿಸುವುದು.

12. ಸೋಡಿಯಂ ಕ್ಲೋರೈಡ್ ದ್ರಾವಣವನ್ನು ಪ್ಲಾಟಿನಂ ಇಲೆಕ್ಟ್ರೋಡುಗಳನ್ನು ಉಪಯೋಗಿಸಿ ವಿದ್ಯುತ್ ವಿಶ್ಲೇಷಣೆಗೆ ಒಳಪಡಿಸಲಾಗುವುದು.

a) ಕೇಥೋಡಿನಲ್ಲಿ ಜರಗುವ ರಾಸಾಯನಿಕ ಬದಲಾವಣೆಯ ಸಮೀಕರಣವನ್ನು ಬರೆಯಿರಿ. (1)

b) ದ್ರಾವಣಕ್ಕೆ ಫಿನೋಪ್ತಲಿನನ್ನು ಸೇರಿಸುವಾಗ ಏನು ಸಂಭವಿಸುವುದು. ಕಾರಣವೇನು? (2)

ಸ್ಕೋರ್ 3, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ಗೇಲ್ವನಿಕ್ ಸೆಲ್ಲುಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳನ್ನು ಬರೆಯಲು ಸಾಧ್ಯವಾಗುವುದು.

13. ಎರಡು ಗೇಲ್ವನಿಕ್ ಸೆಲ್ಲುಗಳ ಏನೋಡ್ ಮತ್ತು ಕೇಥೋಡ್‌ಗಳನ್ನು ನೀಡಲಾಗಿದೆ.

| ಗೇಲ್ವನಿಕ್ ಸೆಲ್ಲು | ಏನೋಡ್ | ಕೇಥೋಡ್ |
|---|---|---|
| ಸೆಲ್ 1 | Mg | Zn |
| ಸೆಲ್ 2 | Zn | Ag |

A. $Mg \rightarrow Mg^{2+} + 2e^-$  D. $Zn \rightarrow Zn^{2+} + 2e^-$

B. $Zn^{2+} + 2e^- \rightarrow Zn$  E. $Ag \rightarrow Ag^+ + le^-$

C. $Ag^+ + le^- \rightarrow Ag$  F. $Mg^{2+} + 2e^- \rightarrow Mg$

a) ಪ್ರತಿಯೊಂದು ಸೆಲ್ಲುಗಳ ಏನೋಡ್ ಮತ್ತು ಕೇಥೋಡ್‌ಗಳಲ್ಲಿ ಜರಗುವ ಕ್ರಿಯೆಗಳನ್ನು ಮೇಲಿನವುಗಳಿಂದ ಕಂಡುಹಿಡಿದು ಬರೆಯಿರಿ. (2)

b) ಕೇಥೋಡಾಗಿ ಮಾತ್ರ ಕಾರ್ಯವೆಸಗುವ ಲೋಹ ಯಾವುದು? ಯಾಕೆ ? (2)

ಸ್ಕೋರ್ 4, ಸಮಯ 6 ನಿಮಿಷ

**ಕಲಿಕೆಯ ಸಾಧನೆ**

- ರಿಡೋಕ್ಸ್ ಕ್ರಿಯೆಗಳನ್ನು ಗುರುತಿಸಿ ತಿಳಿಯುವರು.

14. ವಿವಿಧ ಗೇಲ್ವನಿಕ್ ಸೆಲ್ಲುಗಳ ರಾಸಾಯನಿಕ ಕ್ರಿಯೆಗಳ ಅಪೂರ್ಣ ಪಟ್ಟಿಯನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಭರ್ತಿಗೊಳಿಸಿರಿ.

ಸ್ಕೋರ್ 3, ಸಮಯ 5 ನಿಮಿಷ

| ಸೆಲ್ | ರಾಸಾಯನಿಕ ಕ್ರಿಯೆ | | ರಿಡೋಕ್ಸ್ ಕ್ರಿಯೆ |
|---|---|---|---|
| | ಏನೋಡ್ | ಕೇಥೋಡ್ | |
| Zn - Cu | ............ | $Cu^{2+} + 2e^- \rightarrow Cu$ | ............ |
| Fe - Ag | ............ | ............ | $Fe + 2Ag^+ \rightarrow Fe^{2+} + 2Ag$ |
| Mg - Pb | $Mg \rightarrow Mg^{2+} + 2e^-$ | ............ | ............ |

## ಕಲಿಕೆಯ ಸಾಧನೆ

- ಗೇಲ್ವನಿಕ್ ಸೆಲ್ಲುಗಳನ್ನು ತಯಾರಿಸುವರು

15. ಒಂದು ಗೇಲ್ವನಿಕ್ ಸೆಲ್ಲಿನ ಚಿತ್ರವನ್ನು ಕೆಳಗೆ ನೀಡಲಾಗಿದೆ.




a) A ಮತ್ತು B ಕಂಡುಹಿಡಿದು ಗುರುತಿಸಿರಿ. (1)

b) ಇಲೆಕ್ಟ್ರೋನ್‌ನ ಪ್ರವಾಹದ ದಿಕ್ಕು ಯಾವ ಭಾಗಕ್ಕಿರುವುದು. (1)

c) ಏನೋಡ್ ಮತ್ತು ಕೇಥೋಡುಗಳಲ್ಲಿ ಜರಗುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. (2)

ಸ್ಕೋರ್ 4, ಸಮಯ 6 ನಿಮಿಷ

## ಕಲಿಕೆಯ ಸಾಧನೆ

- ವಿವಿಧ ರೀತಿಯ ವಿದ್ಯುತ್ ವಿಶ್ಲೇಷಣಾ ಸೆಲ್ಲುಗಳನ್ನು ಪರಿಚಯಿಸಿ ಅದರ ರಾಸಾಯನಿಕ ಕ್ರಿಯೆಗನ್ನು ವಿವರಿಸಲು ಸಾಧ್ಯವಾಗುವುದು.

16. ವಿವಿಧ ಇಲೆಕ್ಟ್ರೋಲೈಟುಗಳನ್ನು ವಿದ್ಯುತ್ ವಿಶ್ಲೇಷಣೆಗೆ ಒಳಪಡಿಸುವುದಕ್ಕೆ ಸಂಬಂಧಿಸಿದ ಒಂದು ಅಪೂರ್ಣ ಪಟ್ಟಿಯನ್ನು ಕೆಳಗೆ ನೀಡಲಾಗಿದೆ. ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಇಲೆಕ್ಟ್ರೋಲೈಟುಗಳು | ಅಯೋನುಗಳು/ ಅಣುಗಳು | ರಾಸಾಯನಿಕ ಕ್ರಿಯೆ | |
|---|---|---|---|
| | | ಏನೋಡಿನಲ್ಲಿ | ಕೇಥೋಡಿನಲ್ಲಿ |
| $CuCl_2$ ದ್ರಾವಣ | .......................... | $2Cl^- \rightarrow Cl_2 + 2e^-$ | $Cu^{2+} + 2e \rightarrow Cu$ |
| $H_2SO_4$ ಸೇರಿಸಿದ ನೀರು | $2H_3O^+$, $SO_4^{2-}$, $H_2O$ | ........................ | $2H_3O^+ + 2e^- \rightarrow H_2 + 2H_2O$ |
| ದ್ರವೀಕರಿಸಿದ NaCl | .......................... | $2Cl^- \rightarrow Cl_2 + 2e^-$ | ......................................... |
| NaCl ದ್ರಾವಣ | $Na^+$, $Cl^-$, $H_2O$ | ........................ | ......................................... |

ಸ್ಕೋರ್ 3 ಸಮಯ 6 ನಿಮಿಷ

## ಕಲಿಕೆಯ ಸಾಧನೆ

- ಲೋಹಗಳ ಸ್ಥಾನಪಲ್ಲಟ ಕ್ರಿಯೆಗಳನ್ನು ವಿವರಿಸಲು ಸಾಧ್ಯವಾಗುವುದು.

17. ಒಂದು ಟೆಸ್ಟ್ ಟ್ಯೂಬಿನಲ್ಲಿ 5 ml $AgNO_3$ ದ್ರಾವಣನನ್ನು ತೆಗೆದುಕೊಂಡು ಅದಕ್ಕೆ ಒಂದು ತಾಮ್ರದ ದಂಡವನ್ನು ಮುಳುಗಿಸಿ ಇರಿಸಲಾಗಿದೆ.

a) ತಾಮ್ರದ ದಂಡದಲ್ಲಿ ಮತ್ತು ದ್ರಾವಣದಲ್ಲಿ ಉಂಟಾಗುವ ಬದಲಾವಣೆ ಏನು? (1)

b) ಈ ಕ್ರಿಯೆಯ ರಾಸಾಯನಿಕ ಸಮೀಕರಣವನ್ನು ಪೂರ್ತಿಗೊಳಿಸಿರಿ.

$Cu + 2AgNO_3 \rightarrow$ .......... + .......... (1)

c) ಉತ್ಕರ್ಷಣೆ ಮತ್ತು ಅಪಕರ್ಷಣಾ ಕ್ರಿಯೆಗಳ ರಾಸಾಯನಿಕ ಸಮೀಕರಣಗಳನ್ನು ಬರೆಯಿರಿ. (2)

ಸ್ಕೋರ್ 4, ಸಮಯ 8 ನಿಮಿಷ

5

# ಲೋಹದ ಉತ್ಪಾದನೆ

**ಕಲಿಕೆಯ ಸಾಧನೆ**

- ಅದಿರುಗಳನ್ನು ಗುರುತಿಸಿ ತಿಳಿಯುವುದು

1. ಕೆಲವು ಲೋಹ ಮತ್ತು ಅದಿರುಗಳನ್ನು ನೀಡಲಾಗಿದೆ. ಯೋಗ್ಯವಾದವುಗಳನ್ನು ಹೊಂದಿಸಿ ಪಟ್ಟಿ ಮಾಡಿರಿ.

| ಲೋಹ | ಅದಿರು |
|---|---|
| ಅಲ್ಯುಮಿಲಿಯಂ | ಕೆಲಾಮಿನ್ |
| ಸತು | ಬೋಕ್ಸೈಟ್ |
| ಕಬ್ಬಿಣ | ಕುಪ್ರೈಟ್ |
| ತಾಮ್ರ | ಹೆಮಟೈಟ್ |

ಸ್ಕೋರ್ 2, ಸಮಯ 3 ನಿಮಿಷ

**ಕಲಿಕೆಯ ಸಾಧನೆ**

- ಅದಿರುಗಳ ಸಾಂದ್ರೀಕರಣದ ಕೆಲವು ವಿಧಾನಗಳನ್ನು ಕಂಡುಹಿಡಿಯುವುದು.

2. ಅದಿರುಗಳ ಸ್ವಭಾವವನ್ನು ನೀಡಲಾಗಿದೆ. ಆವರಣದಿಂದ ಯೋಗ್ಯವಾದ ಸಾಂದ್ರೀಕರಣ ವಿಧಾನವನ್ನು ಆರಿಸಿ ಜೊತೆಗೊಳಿಸಿರಿ.

(ಆಯಸ್ಕಾಂತೀಯ ಬೇರ್ಪಡಿಸುವಿಕೆ, ನೊರೆಯಲ್ಲಿ ತೇಲಿಸುವುದು. ನೀರಿನ ಪ್ರವಾಹದಲ್ಲಿ ತೊಳೆಯುವುದು, ಲೀಚಿಂಗ್)

(i) ಆದಿರಿನ ಸಾಂದ್ರತೆ ಕಡಿಮೆ, ಕಶ್ಮಲದ ಸಾಂದ್ರತೆ ಹೆಚ್ಚು.

(ii) ಆದಿರಿಗೆ ಕಾಂತೀಯ ಸ್ವಭಾವವಿದೆ. ಆದರೆ ಕಶ್ಮಲಕ್ಕೆ ಕಾಂತೀಯ ಸ್ವಭಾವವಿಲ್ಲ.

(iii) ಅದಿರನ್ನು ವಿಲೀನಗೊಳಿಸಲು ದ್ರಾವಕಗಳನ್ನು ಉಪಯೋಗಿಸುವರು.

(iv) ಅದಿರಿನ ಸಾಂದ್ರತೆ ಹೆಚ್ಚು ಮತ್ತು ಕಶ್ಮಲದ ಸಾಂದ್ರತೆ ಕಡಿಮೆ.

ಸ್ಕೋರ್ 4, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಕೇಲ್ಸಿನೇಶನ್ ರೋಸ್ಟಿಂಗ್ ಎಂಬಿವುಗಳೊಳಗಿನ ವ್ಯತ್ಯಾಸವನ್ನು ತಿಳಿಯುವುದು.

3. ಸತುವಿನ ಕಾರ್ಬೋನೇಟನ್ನು ಸತುವಿನ ಒಕ್ಸೈಡಾಗಿ ಬದಲಾಯಿಸಲು ಕೇಲ್ಸಿನೇಶನ್ ವಿಧಾನವನ್ನು ಉಪಯೋಗಿಸುವರು. ಆದರೆ ಕ್ಯುಪ್ರಸ್ ಸಲ್ಫೈಡನ್ನು ಕ್ಯುಪ್ರಸ್ ಒಕ್ಸೈಡಾಗಿ ಬದಲಾಯಿಸುವುದು ರೋಸ್ಟಿಂಗ್ ರೋಸ್ಟಿಂಗ್ ವಿಧಾನದಿಂದಾಗಿದೆ.

(a) ಕೇಲ್ಸಿನೇಶನ್ ಮತ್ತು ರೋಸ್ಟಿಂಗ್‌ಗಳೊಳಗಿನ ವ್ಯತ್ಯಾಸವೇನು? (2)

(b) ಕೇಲ್ಸಿನೇಶನ್‌ನಿಗೆ ಒಳಗಾಗುವಾಗ ಅದಿರಿಗೆ ಉಂಟಾಗುವ ರಾಸಾಯನಿಕ ಬದಲಾವಣೆ ಏನು? (1)

ಸ್ಕೋರ್ 3, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಲೋಹ ಶುದ್ಧೀಕರಣಕ್ಕಿರುವ ವಿವಿಧ ವಿಧಾನಗಳನ್ನು ಆರಿಸುವುದು.

4. (a) ಕೆಲವು ಲೋಹಗಳ ಮತ್ತು ಅವುಗಳ ಶುದ್ಧೀಕರಣ ವಿಧಾನಗಳನ್ನು ನೀಡಲಾಗಿದೆ. ಯೋಗ್ಯವಾದವುಗಳನ್ನು ಹೊಂದಿಸಿ ಬರೆಯಿರಿ. (3)

| |
|---|
| ಪಾದರಸ, ಸತು, ತವರ, ತಾಮ್ರ, ಸೀಸ |
| ದ್ರವೀಕರಿಸಿ ಬೇರ್ಪಡಿಸುವುದು, ವಿದ್ಯುತ್ ವಿಶ್ಲೇಷಣೆ, ಭಟ್ಟಿ ಇಳಿಸುವಿಕೆ |

(b) ಪಾದರಸ ಮತ್ತು ಸತು ಎಂಬೀ ಲೋಹಗಳನ್ನು ಶುದ್ಧೀಕರಿಸುವ ವಿಧಾನಗಳನ್ನು ನೀವು ಇವುಗಳಿಂದ ಆರಿಸಲಿರುವ ಕಾರಣವನ್ನು ಬರೆಯಿರಿ. (1)

ಸ್ಕೋರ್ 4, ಸಮಯ 8 ನಿಮಿಷ

**ಕಲಿಕೆಯ ಸಾಧನೆ**

- ಲೋಹಗಳ ಕ್ರಿಯಾಶ್ರೇಣಿ ಮತ್ತು ಲೋಹದ ಬೇರ್ಪಡಿಸುವಿಕೆಗಳೊಳಗಿನ ಸಂಬಂಧ.

5. ಲೋಹಗಳ ಕ್ರಿಯಾಶೀಲತೆಯ ಕ್ರಮವನ್ನು ನೀಡಲಾಗಿದೆ. ಇದನ್ನು ಉಪಯೋಗಿಸಿ ಕೆಳಗೆ ನೀಡಲಾದ ಪ್ರಶ್ನೆಗಳನ್ನು ಉತ್ತರಿಸಿರಿ.

$$Al > Zn > Cu > Au$$

(a) ದ್ರವೀಕರಿಸಿದ ಯೌಗಿಕವನ್ನು ವಿದ್ಯುತ್ ವಿಶ್ಲೇಷಣೆಗೆ ಒಳಪಡಿಸಿ ತಯಾರಿಸುವ ಲೋಹ ಯಾವುದು? (1)

(b) ಪ್ರಕೃತಿಯಲ್ಲಿ ಸ್ವತಂತ್ರ ಸ್ಥಿತಿಯಲ್ಲಿ ಕಂಡುಬರುವ ಲೋಹ (1)

(c) ಲೋಹ ಸಲ್ಫೈಡನ್ನು ಸ್ವಯಂ ಉತ್ಕರ್ಷಣೆ ಮತ್ತು ಅಪಕರ್ಷಣೆಗೆ ಒಳಪಡಿಸುವ ವಿಧಾನವನ್ನು ಉಪಯೋಗಿಸಿ ತಯಾರಿಸುವ ಲೋಹ ಯಾವುದು? (1)

(d) ಕಾರ್ಬನ್‌ನನ್ನು ಉಪಯೋಗಿಸಿ ಅಪಕರ್ಷಿಸಿ ತಯಾರಿಸುವ ಲೋಹ ಯಾವುದು? (1)

ಸ್ಕೋರ್ 4, ಸಮಯ 5 ನಿಮಿಷ

**ಕಲಿಕೆಯ ಸಾಧನೆ**

- ಲೋಹದ ತಯಾರಿಯಲ್ಲಿ ಅಪಕರ್ಷಣಕಾರಿಯ ರಾಸಾಯನಿಕ ಕ್ರಿಯೆಯನ್ನು ತಿಳಿಯುವುದು.

6. ಅದಿರಿನಿಂದ ಲೋಹವನ್ನು ಬೇರ್ಪಡಿಸುವುದಕ್ಕಾಗಿ ಅಪಕರ್ಷಣಕಾರಿಯು ಅಗತ್ಯವಾಗಿದೆ. ಯಾಕೆ? ಉದಾಹರಣೆಯ ಮೂಲಕ ವಿವರಿಸಿರಿ.

ಸ್ಕೋರ್ 2, ಸಮಯ 4 ನಿಮಿಷ

**ಕಲಿಕೆಯ ಸಾಧನೆ**

- ಕಬ್ಬಿಣದ ತಯಾರಿಯ ವಿಧಾನವನ್ನು ವಿವರಿಸುವುದು.

7. ಕಬ್ಬಿಣವನ್ನು ತಯಾರಿಸುವಾಗ ಊದುಕುಲುಮೆಯಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳ ಸಮೀಕರಣಗಳನ್ನು ನೀಡಲಾಗಿದೆ. ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿರಿ.

$$C + O_2 \rightarrow CO_2$$

$$CO_2 + C \rightarrow 2CO$$

$$CaCO_3 \rightarrow CaO + CO_2$$

$$CaO + SiO_2 \rightarrow CaSiO_3$$

$$Fe_2O_3 + 3CO \rightarrow 2Fe + 3CO_2$$

(a) ಕಬ್ಬಿಣದ ತಯಾರಿಯಲ್ಲಿ ಹೆಮಟೈಟನ್ನು ಅಪಕರ್ಷಿಸುವ ವಸ್ತು ಯಾವುದು? ಇದು ಕುಲುಮೆಯಲ್ಲಿ ಉಂಟಾಗುವುದು ಹೇಗೆ? (2)

(b) ಹೆಮಟೈಟಿನಲ್ಲಿ ಪ್ರಧಾನವಾಗಿ ಕಂಡುಬರುವ ಕಶ್ಮಲ ಯಾವುದು? ಈ ಗೇಂಗನ್ನು ನೀಗಿಸಲು ಉಪಯೋಗಿಸುವ ವಸ್ತು ಯಾವುದು? (1)

(c) ಊದು ಕುಲುಮೆಯಲ್ಲಿ ಸ್ಲೇಗ್ ಉಂಟಾಗುವ ರಾಸಾಯನಿಕ ಕ್ರಿಯೆಯನ್ನು ಬರೆಯಿರಿ. (1)

ಸ್ಕೋರ್ 4, ಸಮಯ 4 ನಿಮಿಷ

---

**ಕಲಿಕೆಯ ಸಾಧನೆ**

- ಪಿಗ್ ಅಯರ್ನ್ ಮತ್ತು ಕಾಸ್ಟ್ ಅಯರ್ನ್‌ಗಳೊಳಗಿನ ವ್ಯತ್ಯಾಸವನ್ನು ತಿಳಿಯುವುದು.

8. (a) ಪಿಗ್ ಅಯರ್ನನ್ನು ಕಾಸ್ಟ್ ಅಯರ್ನ್ ಆಗಿ ಮಾರ್ಪಡಿಸುವುದು ಹೇಗೆ?

   (b) ಪಿಗ್ ಅಯರ್ನನ್ನು ಅಚ್ಚುಗಳಲ್ಲಿ ಎರಕ ಹೊಯ್ದು ವಿವಿಧ ಆಕೃತಿಗಳನ್ನು ತಯಾರಿಸುವರು. ಇದಕ್ಕೆ ಕಾರಣವಾಗಿರುವ ಕಾಸ್ಟ್ ಅಯರ್ನಿನ ವೈಶಿಷ್ಟ್ಯ ಯಾವುದು?

ಸ್ಕೋರ್ 2, ಸಮಯ 3 ನಿಮಿಷ

---

**ಕಲಿಕೆಯ ಸಾಧನೆ**

- ಉಕ್ಕಿನ ಮಿಶ್ರಲೋಹಗಳ ವೈಶಿಷ್ಟ್ಯವನ್ನು ತಿಳಿಯುವುದು.

9. ಕಬ್ಬಿಣವನ್ನೊಳಗೊಂಡ ಮಿಶ್ರಲೋಹಗಳನ್ನು ಕೊಡಲಾಗಿದೆ. a, b, c, d ಗಳನ್ನು ಕಂಡುಹಿಡಿಯಿರಿ.

| ಮಿಶ್ರಲೋಹಗಳು | ಘಟಕಗಳು | ಉಪಯೋಗ |
|---|---|---|
| i) ಆಲ್ನಿಕೊ | (a) .............................. | (b) .............................. |
| ii) (c) .............................. | Fe, Cr, Ni, C | ಪಾತ್ರೆಗಳ ತಯಾರಿಗೆ |
| iii) ನಿಕ್ರೋಮ್ | Fe, Cr, Ni, C | (d) .............................. |

ಸ್ಕೋರ್ 2, ಸಮಯ 4 ನಿಮಿಷ

---

**ಕಲಿಕೆಯ ಸಾಧನೆ**

- ಬೋಕ್ಸೈಟಿನ ಶುದ್ಧೀಕರಣ ವಿಧಾನವನ್ನು ವಿವರಿಸುವುದು.

10. ಹಾಲ್–ಹೆರಾಲ್ಡ್ ಪ್ರಕ್ರಿಯೆಯ ಮೂಲಕ ಅಲ್ಯುಮಿನಿಯಂ ಕೈಗಾರಿಕಾ ಮಟ್ಟದಲ್ಲಿ ತಯಾರಿಸಲಾಗುವುದು. ಇದರಲ್ಲಿ ಅಲ್ಯುಮಿನಿಯಂ ಅದಿರಿನ ಶುದ್ಧೀಕರಣದ ವಿವಿಧ ಘಟ್ಟಗಳನ್ನು ಕೊಡಲಾಗಿದೆ. ಇದನ್ನು ಅನುಕ್ರಮವಾಗಿ ಬರೆಯಿರಿ.

(i) ಉಂಟಾಗುವ ಅಧಃಕ್ಷೇಪವನ್ನು ಬೇರ್ಪಡಿಸಿ ತೊಳೆದು ಬಿಸಿಮಾಡಿದಾಗ ಅಲ್ಯುಮಿನಾ ದೊರಕುವುದು.

(ii) ಹುಡಿಮಾಡಿದ ಬೋಕ್ಸೈಟನ್ನು ಬಿಸಿ ಸೋಡಿಯಂ ಹೈಡ್ರೋಕ್ಸೈಡ್ ದ್ರಾವಣದಲ್ಲಿ ವಿಲೀನಗೊಳಿಸುವುದು.

(iii) ಸೋಡಿಯಂ ಅಲ್ಯುಮಿನೇಟ್ ದ್ರಾವಣದಿಂದ ಕಲ್ಮಶಗಳನ್ನು ಸೋಸಿ ಬೇರ್ಪಡಿಸುವುದು.

(iv) ದ್ರಾವಣವನ್ನು ದುರ್ಬಲಗೊಳಿಸಿ ಅಲ್ಯುಮಿನಿಯಂ ಹೈಡ್ರೋಕ್ಸೈಡನ್ನು ಅಧಕ್ಷೇಪಗೊಳಿಸುವುದು.

ಸ್ಕೋರ್ 2, ಸಮಯ 6 ನಿಮಿಷ

## ಕಲಿಕೆಯ ಸಾಧನೆ

- ಅಲ್ಯುಮಿನಾದಿಂದ ಅಲ್ಯುಮಿನಿಯಂ ಬೇರ್ಪಡಿಸುವ ವಿಧಾನವನ್ನು ತಿಳಿದುಕೊಳ್ಳುವುದು.

11. (a) ಅಲ್ಯುಮಿನಾದಿಂದ ಅಲ್ಯುಮಿನಿಯಂ ಬೇರ್ಪಡಿಸಲು ಅಪಕರ್ಷಣಾಕಾರಿಯಾಗಿ ಕಾರ್ಬನ್ ಮೋನೋಕ್ಸೈಡನ್ನು ಉಪಯೋಗಿಸಲು ಸಾಧ್ಯವಿಲ್ಲ ಕಾರಣವೇನು? (1)

(b) ಅಲ್ಯುಮಿನಾದ ವಿದ್ಯುತ್ ವಿಶ್ಲೇಷಣಾ ಸೆಲ್ಲಿನ ಚಿತ್ರವನ್ನು ನೀಡಲಾಗಿದೆ.




(i) ಇಲ್ಲಿ ಇಲೆಕ್ಟ್ರೋಲೈಟ್ ಆಗಿ ಕ್ರಯೋಲೈಟಿನಲ್ಲಿ ವಿಲೀನಗೊಳಿಸಿದ $Al_2O_3$ ಯನ್ನು ಉಪಯೋಗಿಸುವರು. ಕ್ರಯೋಲೈಟನ್ನು ಅಲ್ಯುಮಿನಾದಲ್ಲಿ ಸೇರಿಸುವುದು ಯಾಕೆ? (1)

(ii) ಅಲ್ಯುಮಿನಿಯಂನ ತಯಾರಿಯಲ್ಲಿ ಸೆಲ್ಲಿನ ಏನೋಡನ್ನು ಆಗಾಗ ಬದಲಾಯಿಸಬೇಕಾಗುವುದು. ಕಾರಣವೇನು? (1)

(iii) ಕೇಥೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. (1)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ತಾಮ್ರದ ಶುದ್ಧೀಕರಣದ ಪ್ರಕ್ರಿಯೆಯನ್ನು ವಿವರಿಸುವುದು.

12. ತಾಮ್ರದ ಶುದ್ಧೀಕರಣದ ಕ್ರಿಯೆಯ ವ್ಯವಸ್ಥೆಯನ್ನು ಚಿತ್ರಿಸಿ ಏನೋಡ್ ಕೇಥೋಡ್ ಮತ್ತು ಇಲೆಕ್ಟ್ರೋಲೈಟ್‌ಗಳನ್ನು ಗುರುತಿಸಿರಿ. (2)

(a) ಕೇಥೋಡಿನಲ್ಲಿ ಮತ್ತು ಏನೋಡಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳ ಸಮೀಕರಣಗಳನ್ನು ಬರೆದು, ಇದು ಒಂದು ರಿಡೋಕ್ಸ್ ಕ್ರಿಯೆಯಾಗಿದೆಯೇ ಎಂಬುದನ್ನು ಕಂಡುಹಿಡಿಯಿರಿ. (2)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ಅಲ್ಯುಮಿನಿಯಂ ಅದಿರುಗಳ ಸಾಂದ್ರೀಕರಣವನ್ನು ವಿವರಿಸುವುದು.

13. ಆವೆ ಮಣ್ಣು ಕ್ರಯೋಲೈಟ್ ಮತ್ತು ಬೋಕ್ಸೈಟ್‌ಗಳು ಅಲ್ಯುಮಿನಿಯಂನ ಖನಿಜಗಳಾಗಿವೆ.

(a) ಇವುಗಳಲ್ಲಿ ಅಲ್ಯುಮಿನಿಯಂನ ಅದಿರು ಯಾವುದು? ಅದರ ರಾಸಾಯನಿಕ ಸೂತ್ರವೇನು? (2)

(b) ಒಂದು ಅದಿರಿಗೆ ಇರಬೇಕಾದ ವೈಶಿಷ್ಟ್ಯಗಳು ಯಾವುವು? (2)

ಸ್ಕೋರ್ 4, ಸಮಯ 8 ನಿಮಿಷ

## ಕಲಿಕೆಯ ಸಾಧನೆ

- ಕಬ್ಬಿಣ ತಯಾರಿಯಲ್ಲಿ $CaCO_3$ ಯ ಪಾತ್ರ.

14. ಕೇಲ್ಸಿಯಂ ಕೋರ್ಬೋನೇಟನ್ನು ಬಿಸಿಮಾಡುವಾಗ ಜರಗುವ ರಾಸಾಯನಿಕ ಕ್ರಿಯೆಗಳನ್ನು ನೀಡಲಾಗಿದೆ.

$$CaCO_3 \xrightarrow{\text{ಉಷ್ಣ}} CaO + CO_2$$

ಕಬ್ಬಿಣದ ಕೈಗಾರಿಕಾ ಮಟ್ಟದ ತಯಾರಿಯಲ್ಲಿ ಕೇಲ್ಸಿಯಂ ಕಾರ್ಬೋನೇಟಿನ ಈ ರಾಸಾಯನಿಕ ಬದಲಾವಣೆಯು ಹೇಗೆ ಸಹಕಾರಿಯಾಗಿದೆ.

ಸ್ಕೋರ್ 2, ಸಮಯ 4 ನಿಮಿಷ

**ಕಲಿಕೆಯ ಸಾಧನೆ**

- ಅದಿರಿನ ಸಾಂದ್ರೀಕರಣದ ವಿಧಾನಗಳನ್ನು ತಿಳಿಯುವುದು.

15. ಸಂಬಂಧವನ್ನು ಕಂಡುಹಿಡಿದು ಉತ್ತರಿಸಿರಿ.

(a) ಝಿಂಕ್ ಸಲ್ಫೈಡ್: ರೋಸ್ಟಿಂಗ್ :: ಕ್ಲೆಲಿಯಂ : ....................................................................................

(b) ಕಾರ್ಬೋನೇಟ್ : ಕಾಂತ ವಿಭಜನೆ :: ಬೋಕ್ಸೈಟ್: ......................................

ಸ್ಕೋರ್ 2, ಸಮಯ 8 ನಿಮಿಷ

**ಕಲಿಕೆಯ ಸಾಧನೆ**

- ಬೋಕ್ಸೈಟಿನ ಶುದ್ಧೀಕರಣ ತಿಳಿಯುವುದು.

16. ಅಲ್ಯುಮಿನಿಯಂ ಅದಿರಿನಿಂದ ಅಲ್ಯುಮಿನಾವನ್ನು ತಯಾರಿಸುವ ಕ್ರಿಯೆಯ ಫ್ಲೋಚಾರ್ಟನ್ನು ನೀಡಲಾಗಿದೆ. ಫ್ಲೋಚಾರ್ಟನ್ನು ಭರ್ತಿಗೊಳಿಸಿರಿ.




ಸ್ಕೋರ್ 2, ಸಮಯ 4 ನಿಮಿಷ

6

# ಸಾವಯವ ಯೌಗಿಕಗಳ ನಾಮಕರಣ

## ಕಲಿಕೆಯ ಸಾಧನೆ

- ಶಾಖೆಗಳಿಲ್ಲದ ಆಲ್ಕೇನುಗಳ IUPAC ಹೆಸರು ಅಣುಸೂತ್ರ ರಚನಾ ಸೂತ್ರ ಎಂಬಿವುಗಳನ್ನು ಬರೆಯಲು ಸಾಧ್ಯವಾಗುವುದು.

1. ಪಟ್ಟಿಯನ್ನು ಭರ್ತಿಗೊಳಿಸಿರಿ.

| ಯೌಗಿಕದ ಹೆಸರು | ಕಾರ್ಬನ್ ಪರಮಾಣುಗಳ ಸಂಖ್ಯೆ | ಅಣುಸೂತ್ರ | ರಚನಾ ಸೂತ್ರ |
|---|---|---|---|
| ಬ್ಯೂಟೇನ್ | 4 | $C_4H_{10}$ | $CH_3 - CH_2 - CH_2 - CH_3$ |
| ಹೆಪ್ಟೇನ್ | 7 | (a) ...................... | (b) ................................................ |
| (c) ............................ | 6 | $C_6H_{14}$ | (d) ................................................ |

ಸ್ಕೋರ್ 2, ಸಮಯ 5 ನಿಮಿಷ

## ಕಲಿಕೆಯ ಸಾಧನೆ

- ಒಂದು ಶಾಖೆಯಿರುವ ಹೈಡ್ರೋಕಾರ್ಬನ್‌ಗಳ ರಚನಾ ಸೂತ್ರ IUPAC ಹೆಸರು ಮತ್ತು ಅವುಗಳ ಐಸೋಮರ್‌ಗಳನ್ನು ಬರೆಯಲು ಸಾಧ್ಯವಾಗುವುದು.

2. ಐದು ಕಾರ್ಬನ್ ಪರಮಾಣುಗಳಿರುವ ಒಂದು ಹೈಡ್ರೋಕಾರ್ಬನಿನ ರಚನೆಯನ್ನು ಕೆಳಗೆ ಕೊಡಲಾಗಿದೆ.




(a) ಹೈಡ್ರೋಜನ್ ಪರಮಾಣುಗಳನ್ನು ಸೇರಿಸಿ ರಚನೆಯನ್ನು ಪೂರ್ತಿಗೊಳಿಸಿರಿ. (1)

(b) ಈ ಯೌಗಿಕದ ಅಣುಸೂತ್ರವನ್ನು ಬರೆಯಿರಿ. (1)

(c) ಇದರ ಒಂದು ಚೈನ್ ಐಸೋಮರನ್ನು ಬರೆಯಿರಿ. (1)

(d) IUPAC ಹೆಸರನ್ನು ಬರೆಯಿರಿ. (1)

ಸ್ಕೋರ್ 4, ಸಮಯ 7 ನಿಮಿಷ

## ಕಲಿಕೆಯ ಸಾಧನೆ

- ಹೈಡ್ರೋಕಾರ್ಬನಿನ ರಚನಾಸೂತ್ರ, IUPAC ಹೆಸರು ಪೊಸಿಶನ್ ಐಸೋಮರ್‌ಗಳ ರಚನಾ ಸೂತ್ರ ಎಂಬಿವುಗಳನ್ನು ಬರೆಯಲು ಸಾಧ್ಯವಾಗುವುದು.

3. ಒಂದು ಸಾವಯವ ಯೌಗಿಕದ ರಚನೆಯ ಭಾಗಗಳನ್ನು ಕೆಳಗೆ ಕೊಡಲಾಗಿದೆ.



(a) ನೀಡಿರುವ ಎಲ್ಲಾ ಗುಂಪುಗಳನ್ನು ಯೋಗ್ಯ ರೀತಿಯಲ್ಲಿ ಜೋಡಿಸಿ ಪೂರ್ಣವಾದ ರಚನಾ ಸೂತ್ರವನ್ನು ಬರೆಯಿರಿ. (1)

(b) ಈ ಯೌಗಿಕದ IUPAC ಹೆಸರನ್ನು ಬರೆಯಿರಿ. (1)

(c) ಇದರ ಒಂದು ಪೊಸಿಶನ್ ಐಸೋಮರಿನ ರಚನಾ ಸೂತ್ರವನ್ನು ಬರೆಯಿರಿ. (1)

**ಸ್ಕೋರ್ 3, ಸಮಯ 6 ನಿಮಿಷ**

## ಕಲಿಕೆಯ ಸಾಧನೆ

- ಒಂದು ಶಾಖೆಯಿರುವ ಹೈಡ್ರೋಕಾರ್ಬನಿಗೆ IUPAC ಹೆಸರನ್ನು ನೀಡಲು ಸಾಧ್ಯವಾಗುವುದು.

4. $C_7H_{16}$ ಅಣುಸೂತ್ರವಿರುವ ಒಂದು ಶಾಖೆಯಿರುವ ಹೈಡ್ರೋಕಾರ್ಬನಿಗೆ ವಿಭಿನ್ನ ರೀತಿಯಲ್ಲಿ ನಂಬರ್ ನೀಡಲಾಗಿದೆ.

A. 

B. 

C. 

D. 

(a) ಸರಿಯಾದ ರೀತಿಯಲ್ಲಿ ನಂಬರ್ ನೀಡಿರುವ ರಚನಾ ಸೂತ್ರ ಯಾವುದು? (1)

(b) ಈ ಯೌಗಿಕದ ಶಾಖೆಯಾಗಿ ಬರುವ ಆಲ್ಕೈಲ್ ರೇಡಿಕಲ್ ಹೆಸರೇನು? (1)

(c) ಈ ಯೌಗಿಕದ IUPAC ಹೆಸರನ್ನು ಬರೆಯಿರಿ. (1)

**ಸ್ಕೋರ್ 3, ಸಮಯ 5 ನಿಮಿಷ**

## ಕಲಿಕೆಯ ಸಾಧನೆ

- ಒಂದಕ್ಕಿಂತ ಹೆಚ್ಚು ಮಿಥೈಲ್ ಶಾಖೆಗಳಿರುವ ಹೈಡ್ರೋಕಾರ್ಬನ್ನಗಳ IUPAC ಹೆಸರನ್ನು ಬರೆಯಿರಿ.

5. ಕೆಳಗೆ ಕೊಟ್ಟಿರುವ ಹೈಡ್ರೋ ಕಾರ್ಬನಿನ ರಚನಾ ಸೂತ್ರವನ್ನು ಪರಿಶೀಲಿಸಿ ಪ್ರಶ್ನೆಗಳಿಗೆ ಉತ್ತರಿಸಿರಿ.



(a) ಪ್ರಧಾನ ಸಂಕಲೆಯಲ್ಲಿರುವ ಕಾರ್ಬನ್ ಪರಮಾಣುಗಳ ಸಂಖ್ಯೆ ಎಷ್ಟು? (1)

(b) ಶಾಖೆಗಳ ಸ್ಥಾನ ಸಂಖ್ಯೆಗಳು ಯಾವುವು? (1)

(c) ಈ ಯೌಗಿಕದ IUPAC ಹೆಸರನ್ನು ಬರೆಯಿರಿ. (1)

ಸ್ಕೋರ್ 3, ಸಮಯ 5 ನಿಮಿಷ

---

**ಕಲಿಕೆಯ ಸಾಧನೆ**

- ಈಥೈಲ್ ಮತ್ತು ಮೀಥೈಲ್ ಶಾಖೆಗಳನ್ನೊಳಗೊಂಡ ಹೈಡ್ರೋ ಕಾರ್ಬನ್‌ಗಳ IUPAC ಹೆಸರನ್ನು ಬರೆಯುವುದು.

6. ಒಂದು ಸಾವಯವ ಯೌಗಿಕದ ರಚನೆಗಿರುವ ವೈಶಿಷ್ಟ್ಯಗಳನ್ನು ಕೆಳಗೆ ನೀಡಲಾಗಿದೆ.

- ಇದೊಂದು ಆಲ್ಕೇನ್.
- ಪ್ರಧಾನ ಸಂಕಲೆಯಲ್ಲಿ 7 ಕಾರ್ಬನ್ ಪರಮಾಣುಗಳಿವೆ.
- 3ನೇ ಕಾರ್ಬನ್ ಪರಮಾಣುವಿನಲ್ಲಿ ಒಂದು ಮಿಥೈಲ್ ರೇಡಿಕಲ್ ಮತ್ತು 4ನೇ ಕಾರ್ಬನ್‌ನಲ್ಲಿ ಒಂದು ಈಥೈಲ್ ರೇಡಿಕಲ್ ಇವೆ.

(a) ಈ ಯೌಗಿಕದ ರಚನಾ ಸೂತ್ರವನ್ನು ಬರೆಯಿರಿ. (1)

(b) ಈ ಯೌಗಿಕದ IUPAC ಹೆಸರನ್ನು ಬರೆಯಿರಿ. (2)

ಸ್ಕೋರ್ 3, ಸಮಯ 5 ನಿಮಿಷ

---

**ಕಲಿಕೆಯ ಸಾಧನೆ**

- ಐಸೋಮರ್‌ಗಳನ್ನು ಗುರುತಿಸಿ ಅವುಗಳ ರಚನಾ ಸೂತ್ರ ಮತ್ತು IUPAC ಹೆಸರುಗಳನ್ನು ಬರೆಯಲು ಸಾಧ್ಯವಾಗುವುದು.

7. ಒಂದೇ ರೀತಿಯ ಅನುಸೂತ್ರವಿರುವ ಎರಡು ಯೌಗಿಕಗಳ ಕಾರ್ಯ ವಿಧಾನ ಗುಂಪುಗಳನ್ನು ನೀಡಲಾಗಿದೆ. ಇದನ್ನು ವಿಶ್ಲೇಷಿಸಿ ಬೋಕ್ಸ್‌ಗಳನ್ನು ಪೂರ್ತಿಗೊಳಿಸಿರಿ.

(i)




(3)

(ii) ಇದು ಯಾವ ವಿಧದ ಐಸೋಮರಿಸಂ? (1)

ಸ್ಕೋರ್ 4, ಸಮಯ 6 ನಿಮಿಷ

## ಕಲಿಕೆಯ ಸಾಧನೆಕಲಿಕೆಯ ಸಾಧನೆ

- ವಿವಿಧ ಐಸೋಮರ್‌ಗಳನ್ನು ಗುರುತಿಸಿ ರಚನಾ ಸೂತ್ರ IUPAC ಹೆಸರು ಎಂಬಿವುಗಳನ್ನು ಬರೆಯಲು ಸಾಧ್ಯವಾಗುವುದು.

8. ಕೊಟ್ಟಿರುವ ಸಾವಯವ ಯೌಗಿಕಗಳನ್ನು ವಿಶ್ಲೇಷಿಸಿ ಪ್ರಶ್ನೆಗಳನ್ನು ಉತ್ತರಿಸಿರಿ.

(i) $CH_3 - CH_2 - CH_2 - CH_3$

(ii) $CH_3 - \underset{|}{\underset{OH}{CH}} - CH_2 - CH_3$

| 12. | a. ಸಿಮೆಂಟ್ ತಯಾರಿ – ಸಂಕ್ಷಿಪ್ತವಾಗಿ ಬರೆಯುವರು.<br>b. ನೀರು ಬೆರೆಸಿ ಇಟ್ಟರೆ ಸಿಮೆಂಟ್ ಗಟ್ಟಿಯಾಗುವುದು.<br>ಈ ಕ್ರಿಯೆ ಉಷ್ಣವಿಸರ್ಜಕವಾಗಿದೆ. | 2<br>1 + 1 | 4 |

# ಭಾಗ – ಸಿ

## PART - C

## ಮಾದರಿ ಪ್ರಶ್ನೆಪತ್ರಿಕೆ

**A**

# ವಾರ್ಷಿಕ ಮೌಲ್ಯಮಾಪನ – 2016

## (ಮಾದರಿ ಪ್ರಶ್ನೆ ಪತ್ರಿಕೆ)

## ರಸಾಯನ ಶಾಸ್ತ್ರ

ತರಗತಿ : **X** ಸಮಯ : 1½ **ಗಂಟೆ**

ಒಟ್ಟು ಸ್ಕೋರ್ : 40

**ಸೂಚನೆಗಳು :**

1. 15 ನಿಮಿಷ ಕೂಲ್‌ಓಫ್ ಟೈಮ್ ಆಗಿದೆ. ಪ್ರಶ್ನೆಗಳನ್ನು ಓದುವುದನ್ನು ಉತ್ತರಗಳನ್ನು ಆಲೋಚಿಸುವುದಕ್ಕೆ ಈ ಸಮಯವನ್ನು ಉಪಯೋಗಿಸಬೇಕು.
2. ಪ್ರಶ್ನೆಗಳನ್ನೂ ಸೂಚನೆಗಳನ್ನೂ ಸರಿಯಾಗಿ ಓದಿದ ನಂತರ ಉತ್ತರ ಬರೆಯಿರಿ.
3. ಉತ್ತರ ಬರೆಯುವಾಗ ಸ್ಕೋರ್ ಹಾಗೂ ಸಮಯವನ್ನು ಪರಿಗಣಿಸಬೇಕು.

---

1. ಕೆಲವು ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಕೊಡಲಾಗಿದೆ. (ಸಂಕೇತಗಳು ನಿಜವಾದವುಗಳಲ್ಲ)

   X - $[Ne]\ 3s^2\ 3p^1$

   Y - $[Ar]\ 4s^1$

   Z - $[Ar]\ 3d^6\ 4s^2$

   a) Y ಯ ಪೂರ್ಣರೂಪದ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಬರೆಯಿರಿ. 1

   b) ವಿಭಿನ್ನ ಉತ್ಕರ್ಷಣ ಸ್ಥಿತಿ ಪ್ರದರ್ಶಿಸುವ ಮೂಲವಸ್ತು ಯಾವುದು? 1

   c) Z ನ ಗುಂಪು ಸಂಖ್ಯೆಯನ್ನು ಬರೆಯಿರಿ. 1

   d) Y ಓಕ್ಸಿಜನಿನೊಂದಿಗೆ ಸಂಯೋಗಹೊಂದಿ ಉಂಟಾಗುವ ಯೌಗಿಕದ ರಾಸಾಯನಿಕ ಸೂತ್ರ ಬರೆಯಿರಿ. 1

2. ಒಂದು ಇಕ್ಕಡೆಗಳಲ್ಲಿ ಪ್ರವರ್ತಿಸುವ ರಾಸಾಯನಿಕ ಕ್ರಿಯೆಯನ್ನು ಕೆಳಗೆ ನೀಡಲಾಗಿದೆ.

   $$2SO_2 + O_2 \xrightleftharpoons{V_2O_5} 2SO_3 + \text{ಉಷ್ಣ}$$

   ಸಮತೋಲನ ಸ್ಥಿತಿಯಲ್ಲಿರುವ ಈ ವ್ಯವಸ್ಥೆಯಲ್ಲಿ ಕೆಳಗೆ ನೀಡಲಾದ ಸಂದರ್ಭಗಳು ಮುಂದಕ್ಕೆ ಜರಗುವ ಕ್ರಿಯಾವೇಗವನ್ನು ಯಾವ ರೀತಿಯಲ್ಲಿ ಬಾಧಿಸುವುದು?

   a) $SO_3$ ಯನ್ನು ವ್ಯವಸ್ಥೆಯಿಂದ ಬೇರ್ಪಡಿಸುವುದು 1

   b) ಒತ್ತಡ ಕಡಿಮೆಗೊಳಿಸುವುದು. 1

3. ಕೆಳಗೆ ನೀಡಿದವುಗಳಿಂದ ಸೋಡಿಯಂ ಹೈಡ್ರೋಕ್ಸೈಡಿನ 1M ದ್ರಾವಣವನ್ನು ಆರಿಸಿ ಬರೆಯಿರಿ. (ಸೂಚನೆ : ಸೋಡಿಯಂ ಹೈಡ್ರೋಕ್ಸೈಡಿನ ಅಣುವಿನ ದ್ರವ್ಯರಾಶಿ = 40) 1

   i) 20g NaOH ನ 1 ಲೀಟರ್ ದ್ರಾವಣ

   ii) 10g NaOH ನ 1 ಲೀಟರ್ ದ್ರಾವಣ

   iii) 20g NaOH ನ 500 mL ದ್ರಾವಣ

   iv) 10g NaOH ನ 500 mL ದ್ರಾವಣ

4. ಪಟ್ಟಿಯನ್ನು ಪೂರ್ತಿಗೊಳಿಸಿರಿ. 3

| ಅದಿರಿನ ಸಾದ್ರೀಕರಣ ವಿಧಾನ | ಅದಿರಿನ/ಕಶ್ಮಲದ ವಿಶೇಷತೆ |
|---|---|
| i) ನೀರಿನ ಪ್ರವಾಹದಲ್ಲಿ ತೊಳೆಯುವುದು | (A) ........................................................ |
| ii) (B) ........................................................ | ಯೋಗ್ಯವಾದ ದ್ರಾವಣದಲ್ಲಿ ಅದಿರು ವಿಲೀನವಾಗುವುದು. ಆದರೆ ಕಶ್ಮಲ ವಿಲೀನವಾಗುವುದಿಲ್ಲ. |
| iii) ತೇಲಿಸುವಿಕೆ | (C) ........................................................ |

5. ಒಂದು ಹೈಡ್ರೋಕಾರ್ಬನಿನ ರಚನೆಯನ್ನು ಕೊಡಲಾಗಿದೆ.

$$\begin{array}{l} CH_3 - \underset{\displaystyle CH_3}{\underset{|}{CH}} - CH_2 - \underset{\displaystyle CH_2 - CH_2 - CH_3}{\underset{|}{CH}} - CH_2 - CH_3 \end{array}$$

a) ಪ್ರಧಾನ ಸಂಕಲೆಯಲ್ಲಿರುವ ಕಾರ್ಬನ್ ಪರಮಾಣುಗಳ ಸಂಖ್ಯೆ ಎಷ್ಟು? 1

b) ಈ ಯೌಗಿಕದ IUPAC ಹೆಸರನ್ನು ಬರೆಯಿರಿ. 2

6. ಒಂದು ಗೇಲ್ವಾನಿಕ್‌ಸೆಲ್ಲಿನ ಚಿತ್ರವನ್ನು ಕೊಡಲಾಗಿದೆ.




a) A, B ಇವುಗಳನ್ನು ಕಂಡುಹಿಡಿದು ಬರೆಯಿರಿ. 1

b) ಈ ಸೆಲ್ಲಿನ ಏನೋಡ್ ಯಾವುದು? ಏನೋಡಿನಲ್ಲಿ ಜರಗುವ ರಾಸಾಯನಿಕ ಕ್ರಿಯೆಯ ಸಮೀಕರಣ ಬರೆಯಿರಿ. 2

7. ಕೆಳಗೆ ನೀಡಿರುವ ರಚನಾಸೂತ್ರಗಳನ್ನು ಪರಿಶೀಲಿಸಿ ಪ್ರಶ್ನೆಗಳಿಗೆ ಉತ್ತರಿಸಿರಿ.

| | | |
|---|---|---|
| $CH_3 - CH_2 - COOH$ | $CH_3 - CH_2 - CH_2 - CHO$ | $CH_3 - CO - CH_3$ |
| $CH_3 - CH_2 - Cl$ | $CH_3 - OH$ | |

a) ಎಷ್ಟರುಗಳ ತಯಾರಿಗೆ ಅಗತ್ಯವಿರುವ ರಾಸಾಯನಿಕ ವಸ್ತುಗಳನ್ನು ಆರಿಸಿ ಬರೆಯಿರಿ. 1

b) ಈ ರಾಸಾಯನಿಕ ವಸ್ತುಗಳು ವರ್ತಿಸಿ ಉಂಟಾಗುವ ಎಸ್ಟರಿನ ಹೆಸರೇನು? 1

8. ರಾಸಾಯನಿಕ ಸಮೀಕರಣವನ್ನು ವಿಶ್ಲೇಷಿಸಿ ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

$$2H_2\ (g) + O_2\ (g) \rightarrow 2H_2O\ (g)$$

a) 4 ಮೋಲ್ ಹೈಡ್ರಜನ್ ಪೂರ್ಣವಾಗಿಒ ವರ್ತಿಸಲು ಎಷ್ಟು ಮೋಲ್ ಈಕ್ಸಿಜನ್ ಅಗತ್ಯವಿದೆ? 1

b) 4 ಮೋಲ್ ಹೈಡ್ರಜನ್ ಪೂರ್ಣವಾಗಿ ಉರಿಯುವುದರಿಂದ ಉಂಟಾಗುವ ನೀರಿನಲ್ಲಿರುವ ಒಟ್ಟು ಪರಮಾಣುಗಳೆಷ್ಟು? 1

c) 10 gm ಹೈಡ್ರಜನ್ ಉರಿಯುವುದರಿಂದಾಗಿ ಉಂಟಾಗುವ ನೀರಾವಿಯ ಗಾತ್ರ STP ಯಲ್ಲಿ ಎಷ್ಟು?
(ಸೂಚನೆ : ಪರಮಾಣು ದ್ರವ್ಯರಾಶಿ H – 1, O – 16) 2

9. ಕೆಳಗೆ ಕೊಟ್ಟಿರುವ ರಾಸಾಯನಿಕ ಸಮೀಕರಣಗಳಲ್ಲಿ P, Q, R ಎಂಬಿವುಗಳನ್ನು ಕಂಡುಹಿಡಿಯಿರಿ. 3

i) $CH_3 - CH = CH_2 + Cl_2 \xrightarrow{\text{ಸೂರ್ಯಪ್ರಕಾಶ}}$ ................................ (P)

ii) ................................ (Q) $\xrightarrow{\text{ಉಷ್ಣ}} CH_2 = CH_2 + CH_4$

iii) $nCH_2 = CH_2 \xrightarrow[\text{ಪ್ರೇರಕ}]{\text{ಉಷ್ಣ/ಒತ್ತಡ}}$ ............................. (R)

10. ಊದುಕುಲುಮೆಯಲ್ಲಿ ಜರಗುವ ಪ್ರಧಾನ ರಾಸಾಯನಿಕ ಸಮೀಕರಣಗಳನ್ನು ಕೆಳಗೆ ಕೊಡಲಾಗಿದೆ.

$$CaCO_3 + \text{ಉಷ್ಣ} \rightarrow CaO + CO_2$$

$$CaO + SiO_2 \rightarrow CaSiO_3$$

$$C + O_2 \rightarrow CO_2$$

$$CO_2 + C \xrightarrow{\text{ಉಷ್ಣ}} 2CO$$

$$Fe_2O_3 + 3CO \rightarrow 2Fe + 3CO_2$$

a) ಕಬ್ಬಿಣದ ಉತ್ಪಾದನೆಯ ಸಮಯದಲ್ಲಿ ಊದುಕುಲುಮೆಗೆ ಸೇರಿಸುವ ವಸ್ತುಗಳು ಯಾವುವು? 1

b) ಹೆಮೆಟೈಟ್ ಅಪಕರ್ಷಣೆಗೊಳಗಾಗುವ ಕ್ರಿಯೆ ಯಾವುದು? 1

c) ಕಬ್ಬಿಣ ಉತ್ಪಾದನೆಯಲ್ಲಿ ಕಾಲ್ಸಿಯಂ ಓಕ್ಸೈಡಿನ ಪಾತ್ರವೇನು? 1

11. ಈ ಪ್ರಶ್ನೆಗೆ **ಆಯ್ಕೆ** ಇದೆ. ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಿದರೆ ಸಾಕು.

A. ಕೆಲವು ಸಾವಯವ ಯೌಗಿಕಗಳು ರಚನಾ ಸೂತ್ರಗಳನ್ನು ಕೊಡಲಾಗಿದೆ.

(i) $CH_3 - CH_2 - CH_2 - CHO$

(ii) $CH_3 - CH_2 - CH(NH_2) - CH_3$

```
(ii)  CH3 — CH2 — CH — CH3
                  |
                  NH2
```

(iii) $CH_3 - CH_2 - CH(OH) - CH_3$

```
(iii) CH3 — CH2 — CH — CH3
                  |
                  OH
```

(iv) $CH_3 - CH_2 - CO - CH_3$

a) ಐಸೋಮರ್ ಜೊತೆಯನ್ನು ಕಂಡುಹಿಡಿದು ಬರೆಯಿರಿ. 1

b) ಯೌಗಿಕ (iii) ರ ಪೊಸಿಶನ್ ಐಸೋಮರ್ ಬರೆಯಿರಿ. 1

c) ಯೌಗಿಕ (ii) ರ ಕಾರ್ಯವಿಧಾನ ಗುಂಪು ಐಸೋಮರನ್ನು ಬರೆಯಿರಿ. 1

**ಅಥವಾ**

B. ಒಂದು ಯೌಗಿಕದ ಅಣುಸೂತ್ರ $C_3H_6O$

a) ಈ ಯೌಗಿಕದ ಕಾರ್ಯವಿಧಾನದ ಗುಂಪು ಐಸೋಮರುಗಳ ರಚನಾಸೂತ್ರಗಳನ್ನು ಬರೆಯಿರಿ. 2

b) ಯಾವುದಾದರೂ ಒಂದು ಯಸೋಮರಿನ IUPAC ಹೆಸರು ಬರೆಯಿರಿ.1

12. ಸೋಡಿಯಂ ಕ್ಲೋರೈಡ್ ದ್ರಾವಣವನ್ನು ಪ್ಲಾಟಿನಂ ಇಲೆಕ್ಟ್ರೋಡುಗಳನ್ನುಪಯೋಗಿಸಿ ವಿದ್ಯುದ್ವಿಶ್ಲೇಷಣೆಗೊಳಪಡಿಸಲಾಗುವುದು.

a) ಕೆಥೋಡಿನಲ್ಲಿ ಬಿಡುಗಡೆಯಾಗುವ ಅನಿಲ ಯಾವುದು? 1

b) ಕ್ರಿಯೆಯ ಬಳಿಕ ದ್ರಾವಣಕ್ಕೆ ಫಿನೋಫ್ತಲಿನ್ ಸೇರಿಸಿದಾಗ ಉಂಟಾಗುವ ಬಣ್ಣ ವ್ಯತ್ಯಾಸ ಯಾವುದು? ಇದಕ್ಕೆ ಕಾರಣವೇನು? 2

13. ಚಿತ್ರಗಳನ್ನು ವಿಶ್ಲೇಷಿಸಿ ಉತ್ತರ ಬರೆಯಿರಿ.




ರಾಸಾಯನಿಕ ಕ್ರಿಯೆಯು ವೇಗವಾಗಿ ಜರಗುವ ಟೆಸ್ಟ್‌ಟ್ಯೂಬ್ ಯಾವುದು? ಉತ್ತರವನ್ನು ಸಮರ್ಥಿಸಿರಿ. 3

14. ರೋಗ ಶಮನಕ್ಕೆ ಹಾಗೂ ರೋಗ ಪ್ರತಿರೋಧಕ್ಕಾಗಿ ಔಷಧಿಗಳನ್ನು ಉಪಯೋಗಿಸುವರು.

a) ಶರೀರದ ಉಷ್ಣತೆಯನ್ನು ಕಡಿಮೆಗೊಳಿಸುವ ಔಷಧಿಗಳು ಯಾವ ವಿಭಾಗಕ್ಕೆ ಸೇರುವುದು? 1

b) ನಮ್ಮ ಸಮಾಜದಲ್ಲಿ ಔಷಧ ಉಪಯೋಗ ರೀತಿಗಳಲ್ಲಿ ಹಲವು ಅನಾರೋಗ್ಯಕರವಾದ ಅಭ್ಯಾಸಗಳು ಕಂಡುಬರುವುದು. ಯಾವುದಾದರೂ ಎರಡು ಉದಾಹರಣೆಗಳನ್ನು ಬರೆದು ಅವುಗಳಿಗೆ ಪರಿಹಾರಮಾರ್ಗಗಳನ್ನು ಸೂಚಿಸಿರಿ. 2

**A**

# ಮೌಲ್ಯಮಾಪನ ಸೂಚಕಗಳು

| ಪ್ರಶ್ನೆ ಸಂಖ್ಯೆ | ಮೌಲ್ಯಮಾಪನ ಸೂಚಕಗಳು | ಸ್ಕೋರ್ | ಒಟ್ಟು ಸ್ಕೋರ್ |
|---|---|---|---|
| 1 | (a) $1s^2\ 2s^2\ 2p^6\ 3s^2\ 3p^6\ 4s^1$<br>(b) Z<br>(c) 8<br>(d) $Y_2O$ | 1<br>1<br>1<br>1 | 4 |
| 2 | (a) ಮುಂದಕ್ಕೆ ಜರಗುವ ಕ್ರಿಯಾವೇಗ ಹೆಚ್ಚುವುದು.<br>(b) ಮುಂದಕ್ಕೆ ಜರಗುವ ಕ್ರಿಯಾವೇಗ ಕಡಿಮೆಯಾಗುವುದು. | 1<br>1 | 2 |
| 3 | (iii) 20g NaOH ന്റെ 500 mL ದ್ರಾವಣ | 1 | 1 |
| 4 | A - ಅದಿರಿನ ಸಾಂದ್ರತೆ ಹೆಚ್ಚು<br>ಕಶ್ಮಲಗಳ ಸಾಂದ್ರತೆ ಕಡಿಮೆ<br>B - ಲೀಚಿಂಗ್<br>C - ಅದಿರಿನ ಸಾಂದ್ರತೆ ಕಡಿಮೆ ಮತ್ತು ಕಶ್ಮಲಗಳ ಸಾಂದ್ರತೆ ಹೆಚ್ಚು. | 1<br>1<br>1 | 3 |
| 5 | (a) 7<br>(b) 4 - ಈಥೈಲ್ - 2 - ಮೀಥೈಲ್ ಹೆಪ್ಟೇನ್<br>(ಶಾಖೆಗಳು. ಸ್ಥಾನ ಸಂಖ್ಯೆ ಸರಿಯಾಗಿ ಬರೆದರೆ 1 ಮಾರ್ಕು) | 1<br>2 | 3 |
| 6 | (a) A - Fe B - $CuSO_4$/Cu ದ ಯಾವುದಾದರೂ ಲವಣ ದ್ರಾವಣ<br>(b) Fe (ಕಬ್ಬಿಣ)<br>$Fe \rightarrow Fe^{2+} + 2e^-$ | 1<br>1<br>1 | 3 |
| 7 | (a) $CH_3-CH_2-COOH$, $CH_3-OH$<br>(b) ಮೀಥೈಲ್ ಪ್ರೋಪನೋಯೇಟ್ | 1<br>1 | 2 |
| 8 | (a) 2 ಮೋಲ್<br>(b) 3 x 4 x 6.022 x $10^{23}$ / 12 x 6.022 x $10^{23}$ / 12 x $N_A$<br>(c) ಮೋಲ್‌ಗಳ ಸಂಖ್ಯೆ $= \frac{10}{2} = 5$<br>5 ಮೋಲ್ $H_2$ ವಿನ STP ಗಾತ್ರ = 5 x 22.4 = 112 L | 1<br>1<br>1<br>1 | 4 |
| 9 | (i) $CH_3-CH(Cl)-CH_2Cl$<br>(ii) $CH_3-CH_2-CH_3$<br>(iii)  | 1<br>1<br>1 | 3 |

| ಪ್ರಶ್ನೆ ಸಂಖ್ಯೆ | ಮೌಲ್ಯಮಾಪನ ಸೂಚಕಗಳು | ಸ್ಕೋರ್ | ಒಟ್ಟು ಸ್ಕೋರ್ |
|---|---|---|---|
| 10 | (a) ಹೆಮೆಟೈಟ್, ಕೋಕ್, ಸುಣ್ಣದ ಕಲ್ಲು / $Fe_2O_3$, C, $CaCO_3$<br>(b) $Fe_2O_3 + 3CO \rightarrow 2Fe + 3CO_2$<br>(c) ಫ್ಲಕ್ಸ್/ಗೇಂಗ್ ಆಗಿರುವ $SiO_2$ ನ್ನು ನೀಗಿಸಲು. | 1<br>1<br>1 | <br><br>3 |
| 11 | (a) $CH_3$— $CH_2$— $CH_2$— CHO, $CH_3$— $CH_2$— CO— $CH_3$1<br>(b) $CH_3$— $CH_2$— $CH_2$— $CH_2OH$<br>(c) ಅಮಿನೋ<br>**ಅಥವಾ**<br>(a) $CH_3$— $CH_2$— CHO, $CH_3$— CO — $CH_3$<br>(b) ಪ್ರೋಪನಾಲ್ $CH_3$— $CH_2$— CHO/<br>ಪ್ರೋಪನೋನ್ - $CH_3$— CO — $CH_3$ | <br>1<br>1<br><br>1+1<br><br>1 | <br><br>3 |
| 12 | (a) $H_2$<br>(b) ಪಾಟಲ ಗುಲಾಬಿ ಬಣ್ಣವಾಗುವುದು<br>ಸೋಡಿಯಂ ಹೈಡ್ರೋಕ್ಸೈಡ್ ನ ಇರುವಿಕೆ.<br>ದ್ರಾವಣವು ಕ್ಷಾರೀಯ ಪ್ರಭಾವದ್ದಾಗುವುದು. | 1<br><br><br>1 + 1 | <br><br><br>3 |
| 13 | (a) ಟೆಸ್ಟ್‌ಟ್ಯೂಬ್ B ಯಲ್ಲಿ<br>ಉಷ್ಣತೆ ಹೆಚ್ಚಾಗುವಾಗ ಕ್ಲಪ್ತ ಚೈತನ್ಯವುಳ್ಳ<br>ಅಣುಗಳ ಸಂಖ್ಯೆ ಹೆಚ್ಚುವುದು.<br>ಏಂಟಿಪೈರೆಟಿಕ್ಸ್ | 1<br><br>1<br>1 | <br><br><br>3 |
| 14 | (a) ಸ್ವಯಂ ಚಿಕಿತ್ಸೆ ಮಾಡದಿರುವುದು<br>(b) ಡಾಕ್ಟರು ಸೂಚಿಸುವ ಪ್ರಮಾಣದಲ್ಲಿ ಔಷಧಿಗಳನ್ನು ಸೇವಿಸುವುದು.<br>expiry date ಕಳೆದ ಔಷಧಗಳನ್ನು ಉಪಯೋಗಿಸದಿರುವುದು.<br>ಇನ್ನೊಬ್ಬರಿಗೆ ನೀಡಿದ ಔಷಧವನ್ನು ಸೇವಿಸದಿರುವುದು.<br>(ಸರಿಯಾದ ಯಾವುದಾದರು ಎರಡು ಉದಾಹರಣೆಗಳನ್ನು ಪರಿಹಾರ<br>ವಿಧಾನಗಳನ್ನು ಬರೆಯುವುದು) | 1<br><br><br><br><br>1 + 1 | <br><br><br><br><br>3 |

**B**

# ವಾರ್ಷಿಕ ಮೌಲ್ಯಮಾಪನ – 2016

## (ಮಾದರಿ ಪ್ರಶ್ನೆ ಪತ್ರಿಕೆ)

## ರಸಾಯನ ಶಾಸ್ತ್ರ

ತರಗತಿ **: X** ಸಮಯ : 1½ **ಗಂಟೆ**

ಒಟ್ಟು ಸ್ಕೋರ್ : 40

**ಸೂಚನೆಗಳು :**

1. 15 ನಿಮಿಷ ಕೂಲ್‌ಓಫ್ ಟೈಮ್ ಆಗಿದೆ. ಪ್ರಶ್ನೆಗಳನ್ನು ಓದುವುದನ್ನು ಉತ್ತರಗಳನ್ನು ಆಲೋಚಿಸುವುದಕ್ಕೆ ಈ ಸಮಯವನ್ನು ಉಪಯೋಗಿಸಬೇಕು.
2. ಪ್ರಶ್ನೆಗಳನ್ನೂ ಸೂಚನೆಗಳನ್ನೂ ಸರಿಯಾಗಿ ಓದಿದ ನಂತರ ಉತ್ತರ ಬರೆಯಿರಿ.
3. ಉತ್ತರ ಬರೆಯುವಾಗ ಸ್ಕೋರ್ ಹಾಗೂ ಸಮಯವನ್ನು ಪರಿಗಣಿಸಬೇಕು.

---

1. ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲ ಹಾಗೂ ಮಾರ್ಬಲಿನ ನಡುವಿನ ರಾಸಾಯನಿಕ ಕ್ರಿಯೆಯ ದರವು ಕೆಳಗೆ ಹೇಳಲಾದ ಸಂದರ್ಭಗಳಲ್ಲಿ ಹೇಗೆ ವ್ಯತ್ಯಾಸ ಹೊಂದುತ್ತದೆ? ಕೊಲಿಶನ್ ಸಿದ್ಧಾಂತದ ಆಧಾರದಲ್ಲಿ ಇದರ ಕಾರಣವನ್ನು ವಿಶದಪಡಿಸಿರಿ.
   a) HCl ನ ಪ್ರಬಲತೆಯನ್ನು ಹೆಚ್ಚಿಸುವುದು. 1
   b) ಮಾರ್ಬಲನ್ನು ಹುಡಿಮಾಡಿ ಸೇರಿಸುವುದು. 2
2. ಆವರ್ತಕ ಪಟ್ಟಿಯಲ್ಲಿ 2ನೇ ಆವೃತ್ತಿಯಲ್ಲಿರುವ 'X' ಎಂಬ ಮೂಲವಸ್ತುವಿನ ಹೊರವಲಯದ ಇಲೆಕ್ಟ್ರೋನು ವಿನ್ಯಾಸವು ಕೊನೆಗೊಳ್ಳುವುದು $p^4$ ಎಂದಾಗಿದೆ (ಸಂಕೇತವು ನಿಜವಲ್ಲ)
   a) ಮೂಲವಸ್ತುವಿನ ಸಂಪೂರ್ಣ ಇಲೆಕ್ಟ್ರೋನು ವಿನ್ಯಾಸವನ್ನು ಬರೆಯಿರಿ. 1
   b) ಈ ಮೂಲವಸ್ತುವು ಯಾವ ಗುಂಪಿಗೆ ಸೇರಿದೆ? 1
   c) ಈ ಮೂಲವಸ್ತು ಒಂದನೆ ಗುಂಪಿನ ಮೂಲವಸ್ತುವಾದ ಸೋಡಿಯಂ (Na) ನೊಂದಿಗೆ ವರ್ತಿಸಿ ಉಂಟಾಗುವ ಯೌಗಿಕದ ರಾಸಾಯನಿಕ ಸೂತ್ರವನ್ನು ಬರೆಯಿರಿ. 1
3. NaOH ನ ಅಣುವಿಕ ದ್ರವ್ಯರಾಶಿ 40 ಆಗಿದೆ. 4g NaOH ನೀರಿನಲ್ಲಿ ವಿಲೀನಗೊಳಿಸಿ 1 ಲೀಟರ್ ದ್ರಾವಣ ತಯಾರಿಸಲಾಗುತ್ತದೆ. ಈ ದ್ರವಣದ ಮೋಲಾರ್ ಪ್ರಬಲತೆ ಎಷ್ಟು? 2
4. ಲೋಹದ ಬೇರ್ಪಡಿಸುವಿಕೆಯ ಹಂತದಲ್ಲಿ $ZnCO_3$ ಯನ್ನು ಕೇಲ್ಸಿನೇಶನ್‌ಗೆ ಒಳಪಡಿಸಲಾಗುತ್ತದೆ. ಆದರೆ $Cu_2S$ನ್ನು ರೋಸ್ಟಿಂಗ್‌ಗೆ ಪಳಪಡಿಸಲಾಗುತ್ತದೆ.
   a) ಕೇಲ್ಸಿನೇಶನ್ ಹಾಗೂ ರೋಸ್ಟಿಂಗ್ ಪ್ರಕ್ರಿಯೆಗಳ ನಡುವಿನ ವ್ಯತ್ಯಾಸವೇನು? 2
   b) $ZnCO_3$ ಯನ್ನು ಕೇಲ್ಸಿನೇಶನ್‌ಗೆ ಒಳಪಡಿಸಿದಾಗ ಯಾವ ರಾಸಾಯನಿಕ ಬದಲಾವಣೆಯು ಜರಗುತ್ತದೆ? 1
5. ಅಡುಗೆ ಅನಿಲ (LPG) ಯ ಮುಖ್ಯ ಘಟಕವು ಬ್ಯೂಟೇನ್ ($C_4H_{10}$) ಆಗಿದೆ.
   a) ಇದು ಉರಿಯುವಿಕೆ ಒಳಗಾಗುವ ಕ್ರಿಯೆಯ ರಾಸಾಯನಿಕ ಸಮೀಕರಣವನ್ನು ಬರೆಯಿರಿ. 1
   b) ಬ್ಯೂಟೇನನ್ನು ಉಷ್ಣ ವಿಭಜನೆಗೆ ಒಳಪಡಿಸಿದಾಗ ಲಭಿಸುವ ಉತ್ಪನ್ನವನ್ನು ಕೆಳಗೆ ನೀಡಲಾದವುಗಳಿಂದ ಆಯ್ದು ಬರೆಯಿರಿ. 1

   [$C_5H_{10}$, $C_5H_{12}$, $C_3H_6$, $C_6H_{12}$]

6. A. STP ಯಲ್ಲಿರುವಮಿಥೇನ್ ($CH_4$) ಅನಿಲದ ಗಾತ್ರವು 224 L ಆಗಿದೆ ಎಂದಿರಲಿ.

a) ಇದರಲ್ಲಿರುವ $CH_4$ ಅಣುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ. 1

b) STP ಯಲ್ಲಿರುವ ಸಮಾನಗಾತ್ರದ ನೈಟ್ರಜನ್ ಡೈ ಓಕ್ಸೈಡ್ ($NO_2$) ಅನಿಲದ ದ್ರವ್ಯರಾಶಿಯನ್ನು ಗ್ರಾಂಗಳಲ್ಲಿ ಕಂಡುಹಿಡಿಯಿರಿ.

(ಪರಮಾಣು ದ್ರವ್ಯ N = 14, O = 16) 2

**ಅಥವಾ**

B. ಕೆಳಗೆ ನೀಡಲಾದ ಚಟುವಟಿಕೆಯನ್ನು ವಿಶ್ಲೇಷಿಸಿ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ (ಪರಮಾಣು ದ್ರವ್ಯರಾಶಿ N - 14, H - 1)

$N_2 + 3H_2 \rightarrow 2NH_3$

a) 10 ಮೋಲ್ ಅಮೋನಿಯಾ ಲಭಿಸಲು ಅಗತ್ಯವಾದ ಹೈಡ್ರಜನ್‌ನ ಪರಿಮಾಣವನ್ನು ಮೋಲ್‌ಗಳಲ್ಲಿ ಕಂಡಿಹಿಡಿಯಿರಿ. 1

b) 1700g $NH_3$ ಲಭಿಸಲು ಎಷ್ಟು ಗ್ರಾಂ $N_2$ ಬೇಕು? 2

7. "ಪರಿಸರ ಸ್ನೇಹಿ ಉತ್ಪನ್ನಗಳನ್ನು ನಿರ್ಮಿಸುವುದು."

ಹಸಿರು ರಸಾಯನ ಶಾಸ್ತ್ರದ ಪ್ರಧಾನ ಉದ್ದೇಶಗಳಲ್ಲಿ ಒಂದನ್ನು ಮೇಲೆ ನೀಡಲಾಗಿದೆ. ಇದನ್ನು ಉದಾಹರಣೆ ಸಹಿತ ವಿವರಿಸಿರಿ. 2

8. ಇಕ್ಕಡೆಗಳಲ್ಲಿ ಪ್ರವರ್ತಿಸುವ ರಾಸಾಯನಿಕ ಕ್ರಿಯೆಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

$H_{2(g)} + I_{2(g)} \rightleftharpoons 2HI_{(g)}$

$N_{2(g)} + 3H_{2(g)} \rightleftharpoons 2NH_{3(g)}$

ಇವುಗಳಲ್ಲಿ ಒತ್ತಡವು ಪ್ರಭಾವ ಬೀರದ ಕ್ರಿಯೆ ಯಾವುದು? ಉತ್ತರವನ್ನು ಸಮರ್ಥಿಸಿರಿ. 2

9. ವಿಭಿನ್ನ ಪ್ರನಾಳಗಳಲ್ಲಿ ತೆಗೆದುಕೊಂಡ ಕೋಪರ್, ಸೊಡಿಯಂ, ಮೇಗ್ನೇಶಿಯಂ ಎಂಬಿವುಗಳು ನೀರಿನೊಂದಿಗೆ ವರ್ತಿಸುವ ಕ್ರಿಯೆಯ ನಿರೀಕ್ಷಣೆಗಳನ್ನು ಕೆಳಗೆ ಕೊಡಲಾಗಿದೆ.

I. ನೀರನ್ನು ಬಿಸಿಮಾಡಿದಾಗ ಮಾತ್ರ ಕ್ರಿಯೆಯು ಜರಗುತ್ತದೆ ಮತ್ತು ಅನಿಲದ ಗುಳ್ಳೆಗಳು ಬಿಡುಗಡೆಯಾಗುತ್ತದೆ.

II. ತಣ್ಣೀರಿನೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಯಾವುದೇ ಕ್ರಿಯೆ ಜರಗುವುದಿಲ್ಲ.

III. ತಣ್ಣೀರಿನೊಂದಿಗೆ ತೀವ್ರವಾಗಿ ವರ್ತಿಸುತ್ತದೆ.

a) ಒಂದನೆಯ ನಿರೀಕ್ಷಣೆಗೆ ಸಂಬಂಧಿಸಿದ ಲೋಹ ಯಾವುದು? 1

b) ನೀರಿನೊಂದಿಗಿರುವ ಕ್ರಿಯಾ ಸಾಮರ್ಥ್ಯ ಕಡಿಮೆಯಾಗುವ ರೀತಿಯಲ್ಲಿ ಮೇಲೆ ಹೇಳಿದ ಲೋಹಗಳನ್ನು ಕ್ರಮೀಕರಿಸಿ ಬರೆಯಿರಿ. 1

10. ಗಾಜಿನ ತಯಾರಿಗೆ ಅಗತ್ಯವಾದ ಕಚ್ಛಾ ಪದಾರ್ಥಗಳನ್ನು ನೀಡಲಾಗಿದೆ.

| |
|---|
| ಕ್ಯಾಲ್ಸಿಯಂ ಕಾರ್ಬೋನೇಟ್, ಸಿಲಿಕನ್ ಡೈ ಓಕ್ಸೈಡ್, ಪೊಟಾಶಿಯಂ ಕಾರ್ಬೋನೇಟ್, ಅಲ್ಯುಮಿನಿಯಂ ಓಕ್ಸೈಡ್, ಲೆಡ್ ಓಕ್ಸೈಡ್ |

ಯವಗಳನ್ನು ನಿರ್ಮಿಸಲು ಉಪಯೋಗಿಸುವ ಗಾಜು ಯಾವುದು? ಈ ಗಾಜನ್ನು ನಿರ್ಮಿಸಲು ಅಗತ್ಯವಾದ ಪದಾರ್ಥಗಳನ್ನು ಆವರಣದಿಂದ ಆರಿಸಿ ಬರೆಯಿರಿ. 2

11. a) ಒಂದು ಪದಾರ್ಥದ ಕೈಗಾರಿಕಾ ಮಟ್ಟದ ತಯಾರಿಯ ಹಂತಗಳನ್ನು ಕೆಳಗೆ ನೀಡಲಾಗಿದೆ. ಇದರಲ್ಲಿ ಬಿಟ್ಟು ಹೋದ ಭಾಗಗಳನ್ನು ಭರ್ತಿ ಮಾಡಿರಿ.

$C_{12}H_{22}O_{11} + 2H_2O \xrightarrow{A} C_6H_{12}O_6 + C_6H_{12}O_6$ 1

$C_6H_{12}O_6 \xrightarrow{\text{ಝ್ಲೈಮೇಸ್}} ......B...... + 2CO_2$ 1

b) 'B' ಎಂಬ ಉತ್ಪನ್ನವು ಕೆಳಗೆ ನೀಡಲಾದವುಗಳಲ್ಲಿ ಯಾವುದರೊಂದಿಗೆ ವರ್ತಿಸಿದಾಗ ಎಸ್ಟರ್ ಉಂಟಾಗುತ್ತದೆ? 1

[$CH_3 — CHO$, $CH_3 — COOH$, $CH_3 — CH_2 — CH_2 — OH$]

12. ಕೆಳಗೆ ನೀಡಲಾದ ಹೇಳಿಕೆಗಳಿಂದ ಮಧ್ಯಸ್ಥ ಮೂಲವಸ್ತುಗಳಿಗೆ ಸಂಬಂಧಿಸಿದವುಗಳನ್ನು ಆರಿಸಿ ಬರೆಯಿರಿ.

- ಇವುಗಳಲ್ಲಿ ಹೆಚ್ಚಿನವುಗಳು ರೇಡಿಯೋ ಏಕ್ಟಿವ್ ಮೂಲವಸ್ತುಗಳಾಗಿವೆ.
- ಇವುಗಳ ಓಕ್ಸೈಡುಗಳಿಗೆ ಆಮ್ಲೀಯ ಸ್ವಭಾವವಿದೆ.
- ಬಣ್ಣವಿರುವ ಯೌಗಿಕಗಳನ್ನು ಉಂಟುಮಾಡುತ್ತದೆ.
- ಹೆಚ್ಚಿನವುಗಳೂ ಅಲೋಹಗಳಾಗಿವೆ.
- ವಿಭಿನ್ನ ಉತ್ಕರ್ಷಣಾ ಸ್ಥಿತಿಗಳನ್ನು ತೋರಿಸುತ್ತವೆ. 2

13. ೈಗಾರಿಕಾ ಪ್ರಾಧಾನ್ಯವಿರುವ ಒಂದು ಲೋಹದ ಉತ್ಪಾದನೆಗೆ ಸಂಬಂಧಿಸಿದ ಎರಡು ಹೇಳಿಕೆಗಳನ್ನು ಕೆಳಗೆ ನೀಡಲಾಗಿದೆ.

- ಅಅದಿರು ಬಿಸಿಯಾದ ಪ್ರಬಲ NaOH ದ್ರಾವಣದೊಂದಿಗೆ ವರ್ತಿಸುತ್ತದೆ.
- ಲೋಹವನ್ನು ಬೇರ್ಪಡಿಸಲು ಅಪಕರ್ಷಣಕಾರಿಯಾದ ವಿದ್ಯುತ್ತನ್ನು ಉಪಯೋಗಿಸಲಾಗುತ್ತದೆ.

a) ಈ ವಸ್ತುಗಳು ಯಾವ ಲೋಹದ ಉತ್ಪಾದನೆಗೆ ಸಂಬಂಧಿಸಿದವುಗಳಾಗಿವೆ? 1

b) ಅಪಕರ್ಷಣಕಾರಿಯಾಗಿ ವಿದ್ಯುತ್ತನ್ನು ಉಪಯೋಗಿಸಲು ಕಾರಣವೇನು? 1

14. A ಕಾಲಮಿನ ಮಾಹಿತಿಗಳಿಗೆ ಸರಿಹೊಂದುವವುಗಳನ್ನು B ಕಾಲಮಿನಿಂದ ಆರಿಸಿ ಬರೆಯಿರಿ.

| A<br>ಕಾರ್ಯವಿಧಾನ ಗುಂಪು | B<br>ಸಾಮಾನ್ಯ ಹೆಸರು | |
|---|---|---|
| 1 –CHO | a) ಅಮೀನುಗಳು | 1 |
| 2 $–NH_2$ | b) ಕೀಟೋನುಗಳು | 1 |
| 3 –COOH | c) ಆಲ್ಡಿಹೈಡುಗಳು | 1 |
| | d) ಕಾರ್ಬೋಕ್ಸಿಲಿಕ್ ಏಸಿಡುಗಳು | |

15. ಚಿತ್ರವನ್ನು ಪರಿಶೀಲಿಸಿ ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.




a) ರಾಸಾಯನಿಕ ಕ್ರಿಯೆ ಜರಗುವ ಪ್ರನಾಳವು ಯಾವುದು?
ಇದರಲ್ಲಿ ಜರಗುವ ಬದಲಾವಣೆಗಳು ಯಾವೆಲ್ಲ? ಯಾವ ಯಾವ ಬದಲಾವಣೆಗಳನ್ನು ನಿರೀಕ್ಷಿಸಬಹುದು? 2

b) ಚಟುವಟಿಕೆಯ ರಾಸಾಯನಿಕ ಸಮೀಕರಣವನ್ನು ಬರೆಯಿರಿ. 1

16. ಏಕ ಸಹಭಾಗೀ ಬಂಧವಿರುವ ಒಂದು ಹೈಡ್ರೋಕಾರ್ಬನಿನ ಪ್ರಧಾನ ಸಂಕಲೆಯಲ್ಲಿ 5 ಕಾರ್ಬನ್ ಪರಮಾಣುಗಳಿವೆ. ಇದರಲ್ಲಿ 3ನೆಯ ಕಾರ್ಬನ್ ಪರಮಾಣುವಿನಲ್ಲಿ ಒಂದು $–CH_3$ ಗುಂಪು ಶಾಖೆಯಾಗಿ ಬರುತ್ತದೆ.

a) ಈ ಹೈಡ್ರೋಕಾರ್ಬನಿನ ರಚನಾ ಸೂತ್ರವನ್ನು ಬರೆಯಿರಿ. 1

b) ಇದರ IUPAC ಹೆಸರನ್ನು ಬರೆಯಿರಿ. 1

c) ಈ ಹೈಡ್ರೋಕಾರ್ಬನಿನ ಯಾವುದಾದರೂ ಒಂದು ಐಸೋಮರಿನ ರಚನಾಸೂತ್ರವನ್ನು ಬರೆಯಿರಿ. 1

# B

## ಮೌಲ್ಯಮಾಪನ ಸೂಚಕಗಳು

| ಪ್ರಶ್ನೆ ಸಂಖ್ಯೆ | ಮೌಲ್ಯಮಾಪನ ಸೂಚಕಗಳು | ಸ್ಕೋರ್ | ಒಟ್ಟು ಸ್ಕೋರ್ |
|---|---|---|---|
| 1 | (a) ಪ್ರಬಲತೆ ಹೆಚ್ಚಾಗುವಾಗ ಅಣುಗಳ ಸಂಖ್ಯೆ ಹೆಚ್ಚಾಗುವುದರಿಂದ ಕೊಲಿಶನ್ ದರ ಹೆಚ್ಚಾಗುತ್ತದೆ. | 1 | |
| | (b) • ಹುಡಿ ಮಾಡಿ ಸೇರಿಸುವಾಗ ಮೇಲ್ಮೈ ವಿಸ್ತೀರ್ಣ ಹೆಚ್ಚಾಗುವುದರಿಂದ ಸಂಪರ್ಕಕ್ಕೆ ಬರುವ ಅಣುಗಳ ಸಂಖ್ಯೆ ಹೆಚ್ಚಾಗುತ್ತದೆ. | 1 | |
| | (c) • ಅಣುಗಳ ನಡುವಿನ ಕೊಲಿಶನ್ ದರ ಹೆಚ್ಚುವುದರಿಂದ ವೇಗ ಹೆಚ್ಚಾಗುತ್ತದೆ. | 1 | 3 |
| 2 | (a) $1s^2\ 2s^2\ 2p^4$ | 1 | |
| | (b) 16 ನೆಯ ಗುಂಪಿನಲ್ಲಿ | 1 | |
| | (c) $Na_2X$ ಎಂದು ಕಂಡುಹಿಡಿಯುವುದು. | 1 | 3 |
| 3 | $4g\ NaOH = \frac{4}{40}\ mol = 0.1\ mol$ | 1 | |
| | ಮೊಲಾರಿಟಿ $\frac{0.1}{1L} = 0.1\ M$ | 1 | 2 |
| 4 | a) ಕ್ಯಾಲ್ಸಿನೇಶನ್ – ವಾಯುವಿನ ಸಂಪರ್ಕವಿಲ್ಲದೆ ಬಿಸಿ ಮಾಡುವುದು | 1 | |
| | ರೋಸ್ಟಿಂಗ್ – ವಾಯುವಿನ ಸಂಪರ್ಕದಲ್ಲಿ ಬಿಸಿ ಮಾಡುವುದು. | 1 | |
| | b) $ZnCO_3$ ವಿಭಜಿಸಿ ZnO ಆಗಿ ಬದಲಾಗುವುದು. | 1 | 3 |
| 5 | (a) $2C_4H_{10} + 13O_2 \rightarrow 8CO_2 + 10H_2O$ (ಸಮತೋಲನಗೊಳಿಸಬೇಕಾಗಿಲ್ಲ) | 1 | |
| | (b) $C_3H_6$ | 1 | 2 |
| 6 | (a) ಮೋಲ್ ಗಳ ಸಂಖ್ಯೆ = 10 | | |
| | ಅಣುಗಳ ಸಂಖ್ಯೆ $= 10 \times 6.022 \times 10^{23}/10\ N_A$ | 1 | |
| | (b) $NO_2$ ವಿನ ಅಣುವಿಕ ದ್ರವ್ಯರಾಶಿ = 14 + 32 = 46 | ½ | |
| | ಮೋಲ್ ಗಳ ಸಂಖ್ಯೆ $= \frac{224}{22.4} = 10$ | 1 | |
| | ದ್ರವ್ಯರಾಶಿ $= 10 \times 46 = 460g$ | ½ | 3 |
| | **ಅಥವಾ** | | |
| | (a) 15 ಮೋಲ್ $H_2$ | 1 | |
| | (b) $1700\ g\ NH_3 = \frac{1700}{17}$ ಮೋಲ್ = 100 ಮೋಲ್ $NH_3$ | 1 | |
| | 100 ಮೋಲ್ $NH_3$ ಲಭಿಸಲು 50 ಮೋಲ್ $N_2$ | | |

| ಪ್ರಶ್ನೆ ಸಂಖ್ಯೆ | ಮೌಲ್ಯಮಾಪನ ಸೂಚಕಗಳು | ಸ್ಕೋರ್ | ಒಟ್ಟು ಸ್ಕೋರ್ |
|---|---|---|---|
| | $= 50 \times 28 = 1400$ g $N_2$ | 1 | |
| 7 | ಸೂಕ್ತವಾದ ಉದಾಹರಣೆಗಳೊಂದಿಗೆ ವಿವರಿಸುವುದು. | 2 | 2 |
| 8 | $H_2 + I_2 \rightleftharpoons 2HI$ ಎಂದು ಆಯ್ಕೆ ಮಾಡಿ ಬರೆಯುವುದು. | 1 | |
| | ಅಣುಗಳ/ಮೋಲ್ ಗಳ ಸಂಖ್ಯೆಯಲ್ಲಿ ವ್ಯತ್ಯಾಸವಿಲ್ಲ ಎಂಬ ಆಶಯವನ್ನು ಉಪಯೋಗಿಸಿ ಸಮರ್ಥಿಸುವುದು / ಗಾತ್ರ ವ್ಯತ್ಯಾಸವಿಲ್ಲದಿರುವುದರಿಂದ ಒತ್ತಡವು ಪ್ರಭಾವ ಬೀರುವುದಿಲ್ಲ. | 1 | 2 |
| 9 | (a) ಮೆಗ್ನೀಶಿಯಂ ಎಂದು ತಿಳಿದುಕೊಳ್ಳುವುದು. | 1 | |
| | (b) Na 〉 Mg 〉 Cu | 1 | 2 |
| 10 | ಫ್ಲಿಂಟ್ ಗಾಜು / ಓಪ್ಟಿಕಲ್ ಗ್ಲಾಸ್ | 1 | |
| | ಕ್ಯಾಲ್ಸಿಯಂ ಕಾರ್ಬೋನೇಟ್, ಸಿಲಿಕನ್ ಡೈ ಓಕ್ಸೈಡ್, ಲೆಡ್ ಓಕ್ಸೈಡ್ | 1 | 2 |
| 11 | (a) A - ಇನ್ವರ್ಟೇಸ್ | 1 | |
| | B - $C_2H_5 — OH$ | 1 | |
| | (b) $CH_3 — COOH$ | 1 | 3 |
| 12 | ಬಣ್ಣವಿರುವ ಯೌಗಿಕಗಳನ್ನು ಉಂಟುಮಾಡುತ್ತವೆ. | 1 | |
| | ವಿಭಿನ್ನ ಉತ್ಕರ್ಷಣಾ ಸ್ಥಿತಿಯನ್ನು ತೋರುತ್ತವೆ. | 1 | 2 |
| 13 | (a) ಅಲ್ಯುಮಿನಿಯಂ/Al | 1 | |
| | (b) ವಿದ್ಯುತ್ ಪ್ರಬಲ ಉತ್ಕರ್ಷಣಕಾರಿಯಾಗಿದೆ / Al ನ ಕ್ರಿಯಾಶೀಲತೆ ಹೆಚ್ಚು | 1 | 2 |
| 14 | (a) 1 - c / ಆಲ್ಡಿಹೈಡುಗಳು | 1 | |
| | (b) 2 - a / ಅಮೀನುಗಳು | 1 | |
| | (c) 3 - d / ಕಾರ್ಬೋಕ್ಸಿಲಿಕ್ ಏಸಿಡುಗಳು | 1 | 3 |
| 15 | (a) II ನೆಯ ಪ್ರನಾಳದಲ್ಲಿರುವ ದ್ರಾವಣದ ಬಣ್ಣ ಬದಲಾಗುತ್ತದೆ. | 1 | |
| | Zn ಇಲೆಕ್ಟ್ರೋಡಿನಲ್ಲಿ ತಾಮ್ರವು ನಿಕ್ಷೇಪಿಸಲ್ಪಡುತ್ತದೆ. | 1 | |
| | (b) $CuSO_4 + Zn \rightarrow ZnSO_4 + Cu$ | 1 | 3 |
| 16 | (a) $CH_3 — CH_2 — CH(CH_3) — CH_2 — CH_3$ | 1 | |
| | (b) 3 -ಮೀಥೈಲ್ ಪೆಂಟೇನ್ | 1 | |
| | (c) ಯಾವುದಾದರೂ ಐಸೋಮರಿನ ರಚನಾ ಸೂತ್ರ | 1 | 3 |

# ಕಾಲುವಾರ್ಷಿಕ ಮೌಲ್ಯಮಾಪನ 2016-17

A

FIRST TERM EVALUATION - 2016

## ರಸಾಯನಶಾಸ್ತ್ರ (CHEMISTRY)

ತರಗತಿ : X

ಸಮಯ : 1½ ಗಂಟೆ

ಅಂಕ : 40

**ಸೂಚನೆಗಳು :**

1. ಹದಿನೈದು ನಿಮಿಷ ಕೂಲ್ ಓಫ್ ಟೈಮ್ ಇದೆ. ಪ್ರಶ್ನೆಗಳನ್ನು ಓದಲು ಮತ್ತು ಉತ್ತರಗಳನ್ನು ಕಂಡುಕೊಳ್ಳಲು ಈ ಸಮಯವನ್ನು ವಿನಿಯೋಗಿಸಬೇಕು.
2. ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿದ ಬಳಿಕ ಮಾತ್ರವೇ ಉತ್ತರಿಸಬೇಕು.
3. ಉತ್ತರ ಬರೆಯುವಾಗ ಸ್ಕೋರ್, ಸಮಯ ಎಂಬಿವುಗಳನ್ನು ಪರಿಗಣಿಸಬೇಕು.

1. S ಬ್ಲೋಕ್ ಮೂಲವಸ್ತುಗಳಿಗೆ ಅನ್ವಯಿಸುವ ಗುಣಗಳನ್ನು ಆರಿಸಿ ಬರೆಯಿರಿ. (2)

   a) ಲೋಹ ಹೈಡ್ರೋಕ್ಸೈಡುಗಳು ಕ್ಷಾರೀಯ ಗುಣವನ್ನು ಪ್ರದರ್ಶಿಸುವುವು.

   b) ಬಣ್ಣವಿರುವ ಯೌಗಿಕಗಳನ್ನುಂಟುಮಾಡುವುವು.

   c) ಅಯೋನಿಕ್ ಯೌಗಿಕಗಳನ್ನುಂಟುಮಾಡುವುವು.

   d) ವಿಭಿನ್ನ ಉತ್ಕರ್ಷಣಸ್ಥಿತಿಯನ್ನು ಪ್ರದರ್ಶಿಸುವುವು.

2. ಕೆಳಗೆ ಕೊಟ್ಟಿರುವ ಪ್ರತಿಯೊಂದು ಮೂಲವಸ್ತುವಿನ ಪ್ರಮಾಣವು ಎಷ್ಟು GAM ಆಗಿರುವುದೆಂದೂ, ಪ್ರತಿಯೊಂದರಲ್ಲೂ ಎಷ್ಟು ಪರಮಾಣುಗಳಿರುವುವೆಂದೂ ಕಂಡುಹಿಡಿಯಿರಿ.

   (ಸೂಚನೆ : ಪರಮಾಣು ದ್ರವ್ಯರಾಶಿ $H = 1, C = 12$) (2)

   a) 20g ಹೈಡ್ರಜನ್

   b) 24g ಕಾರ್ಬನ್

3. A. ಅಮೋನಿಯಂ ಕ್ಲೋರೈಡನ್ನು ತೆಗೆದುಕೊಂಡ ಟೆಸ್ಟ್‌ಟ್ಯೂಬಿನ ಬಾಯಿ ಮುಚ್ಚಿ, ಬಿಸಿ ಮಾಡಿದಾಗ ಟೆಸ್ಟ್‌ಟ್ಯೂಬಿನ ಒಳಬದಿಯಲ್ಲಿ ಬಿಳಿ ಪದಾರ್ಥವು ಅಂಟಿಕೊಂಡಿರುವುದು ಕಂಡುಬಂತು.

   a) ಬಿಳಿ ಪದಾರ್ಥ ಯಾವುದು? (1)

   b) ಈ ಉತ್ಪನ್ನ ಉಂಟಾದುದು ಹೇಗೆ? (1)

   c) ಈ ರಾಸಾಯನಿಕ ಕ್ರಿಯೆಯ ಸಮೀಕರಣಗಳನ್ನು ಬರೆಯಿರಿ. (2)

   **ಅಥವಾ**

   B. ಒಂದು ಟೆಸ್ಟ್‌ಟ್ಯೂಬಿನಲ್ಲಿ ಸ್ವಲ್ಪ ಹೈಡ್ರಜನ್ ಪೆರೋಕ್ಸೈಡ್ ತೆಗೆದುಕೊಂಡು ಟೆಸ್ಟ್‌ಟ್ಯೂಬಿನ ಬಾಯಿಗೆ ಒಂದು ಉರಿಯುವ ಅಗರಬತ್ತಿಯನ್ನು ತರಲಾಯಿತು. ಇದೇ ಟೆಸ್ಟ್‌ಟ್ಯೂಬಿಗೆ ಸ್ವಲ್ಪ ಮೇಂಗನೀಸ್ ಡೈ ಓಕ್ಸೈಡ್ ಸೇರಿಸಿ ಪ್ರಯೋಗವನ್ನು ಪುನಃ ನಡೆಸಲಾಯಿತು.

   a) ಅಗರಬತ್ತಿಯು ಪ್ರಕಾಶಮಾನವಾಗಿ ಉರಿದುದು ಯಾವ ಸಂದರ್ಭದಲ್ಲಿ? (1)

   b) ಇಲ್ಲಿ ರಾಸಾಯನಿಕ ಕ್ರಿಯಾ ವೇಗವನ್ನು ಬಾಧಿಸಿದ ಘಟಕ ಯಾವುದು? (1)

   c) ಹೈಡ್ರಜನ್ ಪೆರೋಕ್ಸೈಡ್ ವಿಭಜಿಸಲ್ಪಟ್ಟು ಉಂಟಾದ ಅನಿಲ ಯಾವುದು? (1)

   d) ಈ ರಾಸಾಯನಿಕ ಕ್ರಿಯೆಯ ಸಮತೋಲನಗೊಳಿಸಿದ ಸಮೀಕರಣವನ್ನು ಬರೆಯಿರಿ. (1)

4. ಆವರ್ತಕ ಪಟ್ಟಿಯ ಒಂದು ಭಾಗವನ್ನು ಕೆಳಗೆ ಕೊಡಲಾಗಿದೆ. ಇವುಗಳಲ್ಲಿ Q ಎಂಬ ಮೂಲವಸ್ತುವಿನ ಬಾಹ್ಯವಲಯದ ಇಲೆಕ್ಟ್ರೋನ್ ವಿನ್ಯಾಸ $2s^2 2p^5$ ಆಗಿದೆ. (ಸಂಕೇತ ನಿಜವಾದುದಲ್ಲ)




a) P ಯ ಪರಮಾಣು ಸಂಖ್ಯೆ ಎಷ್ಟು? (1)

b) ಅಯೋನೀಕರಣ ಚೈತನ್ಯ ಹೆಚ್ಚಿರುವ ಮೂಲವಸ್ತು ಯಾವುದು? (1)

c) R ನ ಗುಂಪು ಸಂಖ್ಯೆ ಎಷ್ಟು? (1)

d) S ನ ಬಾಹ್ಯ ವಲಯದ ಸಬ್ ಶೆಲ್ ಇಲೆಕ್ಟ್ರೋನ್ ವಿನ್ಯಾಸ ಬರೆಯಿರಿ. (1)

5. $CH_4 + 2O_2 \rightarrow CO_2 + 2H_2O$ ಸಮತೋಲನಗೊಳಿಸಲ್ಪಟ್ಟ ಸಮೀಕರಣವನ್ನು ಪರಿಶೀಲಿಸಿ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಪರಮಾಣು ದ್ರವ್ಯರಾಶಿ C = 12, O = 16)

a) 1 ಮೋಲ್ $CH_4$ ಉರಿಯುವಾಗ ಎಷ್ಟು ಮೋಲ್ $CO_2$ ಮತ್ತು ಎಷ್ಟು ಮೋಲ್ $H_2O$ ಉಂಟಾಗುವುದು?(2)

b) 2 ಮೋಲ್ $CH_4$ ಉರಿಯುವಾಗ ಎಷ್ಟು ಗ್ರಾಂ $CO_2$ ಉಂಟಾಗುವುದು? (2)

6. ಒಂದು ಮೋಲ್ ಸತು (Zn) ಮತ್ತು ಒಂದು ಮೋಲ್ ಮೆಗ್ನೀಶಿಯಂ (Mg) ಲೋಹಗಳನ್ನು ಸಮಾನ ಪ್ರಬಲತೆಯ HCl ನೊಂದಿಗೆ ವರ್ತಿಸುವಂತೆ ಮಾಡಿದಾಗ ಮೆಗ್ನೀಶಿಯಂ ವೇಗವಾಗಿ ವರ್ತಿಸಿ ಮುಗಿಯುವುದು.

a) ಇಲ್ಲಿ ರಾಸಾಯನಿಕ ಕ್ರಿಯಾವೇಗದ ಮೇಲೆ ಪ್ರಭಾವ ಬೀರಿದ ಘಟಕ ಯಾವುದು? (1)

b) ರಾಸಾಯನಿಕ ಕ್ರಿಯೆಯಿಂದಾಗಿ ಉಂಟಾಗುವ ಅನಿಲ ಯಾವುದು? (1)

c) ಈ ಕ್ರಿಯೆಗಳಲ್ಲಿ ಯಾವುದಾದರೂ ಒಂದರ ಸಮತೋಲನಗೊಳಿಸಿದ ಸಮೀಕರಣ ಬರೆಯಿರಿ. (1)

7. ಒಂದು ಮೂಲವಸ್ತುವಿನ ಇಲೆಕ್ಟ್ರೋನ್ ವಿನ್ಯಾಸ $3d^5 4s^2$ ಎಂದು ಕೊನೆಗೊಳ್ಳುವುದು.

a) ಪೂರ್ಣರೂಪದ ಇಲೆಕ್ಟ್ರೋನ್ ವಿನ್ಯಾಸ ಬರೆಯಿರಿ. (1)

b) ಲೋಹವೋ? ಅಲೋಹವೋ? (1)

c) ಕೊನೆಯ ಇಲೆಕ್ಟ್ರೋನ್ ತುಂಬಲ್ಪಡುವುದು ಯಾವ ಉಪವಲಯದಲ್ಲಾಗಿದೆ? (1)

d) ಈ ಮೂಲವಸ್ತು ಯಾವ ಆವೃತ್ತಿಯಲ್ಲಿದೆ? (1)

8.




ಚಿತ್ರಗಳನ್ನು ವಿಶ್ಲೇಷಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

(ಸೂಚನೆ : ಕಾರ್ಬನ್ – 12 ಪರಮಾಣುವಿನ ದ್ರವ್ಯರಾಶಿಯ $\frac{1}{12}$ ಭಾಗವನ್ನು ಆಧಾರವಾಗಿರಿಸಿ ಅಟೋಮಿಕ್ ಮಾಸ್ ಹೇಳಲಾಗುವುದು.)

a) ಒಂದು ಹೀಲಿಯಂ ಪರಮಾಣುವಿನ ದ್ರವ್ಯರಾಶಿಯಾಗಿರುವುದು ಯಾವುದು? (1)

$\left[\frac{1}{12}C^{12}\times 2, \quad \frac{1}{12}C^{12}\times 4, \quad \frac{1}{12}C^{12}\times 8, \quad \frac{1}{12}C^{12}\times 16\right]$

b) ಓಕ್ಸಿಜನ್ ಪರಮಾಣುವಿನ ದ್ರವ್ಯರಾಶಿಯು $\frac{1}{12}C^{12}$ ರ ಎಷ್ಟು ಮಡಿಯಾಗುವುದು? (1)

9. ಕೇಲ್ಸಿಯಂ ಕಾರ್ಬೋನೇಟ್ ದುರ್ಬಲ HCl ನೊಂದಿಗೆ ವರ್ತಿಸಿ ಕಾರ್ಬನ್ ಡೈಓಕ್ಸೈಡ್ ಉಂಟಾಗುವುದು. 5g $CaCO_3$ ಎರಡು ನಿಮಿಷದಲ್ಲಿ ಪೂರ್ಣವಾಗಿ ವರ್ತಿಸಿ ಕ್ರಿಯೆ ಪೂರ್ತಿಯಾಗುವುದೆಂದಿರಲಿ.

a) ಈ ರಾಸಾಯನಿಕ ಕ್ರಿಯೆಯ ದರವನ್ನು ಕಂಡುಹಿಡಿಯಿರಿ. (2)

b) ಈ ರಾಸಾಯನಿಕ ಕ್ರಿಯೆಯ ವೇಗವನ್ನು ಹೆಚ್ಚಿಸಲು ಎರಡು ವಿಧಾನಗಳನ್ನು ಸೂಚಿಸಿರಿ. (2)

10.




ಗ್ರಾಫ್ ವಿಶ್ಲೇಷಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

a) ಎಲ್ಲಾ ವಲಯಗಳಲ್ಲೂ ಕಂಡುಬರುವ ಉಪವಲಯ ಯಾವುದು? (1)

b) ಉಪವಲಯಗಳ ಚೈತನ್ಯ ಮಟ್ಟದ ಆರೋಹಣ ಕ್ರಮ ಬರೆಯಿರಿ. (2)

11. ಕೆಳಗೆ ಕೊಟ್ಟಿರುವವುಗಳಲ್ಲಿ ದ್ರವ್ಯರಾಶಿ ಹೆಚ್ಚಿರುವುದು ಯಾವುರಲ್ಲಿ ಎಂದು ಕಂಡುಹಿಡಿಯಿರಿ.
(ಪರಮಾಣು ದ್ರವ್ಯರಾಶಿ : H = 1, C = 12, O = 16)

a) 10 ಮೋಲ್ ನೀರು ($H_2O$)

b) 10 ಮೋಲ್ ಕಾರ್ಬನ್ ಡೈಓಕ್ಸೈಡ್ ($CO_2$) (3)

12. ಕೆಲವು ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸ ಕೊಡಲಾಗಿದೆ. (ಸಂಕೇತಗಳು ನಿಜವಾದುದಲ್ಲ)

A - $1s^2\,2s^2\,2p^6\,3s^2\,3p^4$

B - $1s^2\,2s^2\,2p^6\,3s^2\,3p^3$

C - $1s^2\,2s^2\,2p^6\,3s^2\,3p^6\,3d^3\,4s^2$

D - $1s^2\,2s^2\,2p^6$

a) ಒಂದೇ ಆವೃತ್ತಿಯಲ್ಲಿರುವ ಮೂಲವಸ್ತುಗಳು ಯಾವುವು? (1)

b) ಮಧ್ಯಸ್ಥ ಮೂಲವಸ್ತು ಯಾವುದು? (1)

c) ಜಡ ಅನಿಲ ಯಾವುದು? (1)

13. ಗ್ಲೂಕೋಸಿನ ಅಣುವಿಕ ದ್ರವ್ಯರಾಶಿ 180 ಆಗಿದೆ.

a) ಗ್ಲೂಕೋಸಿನ ಒಂದು ಮೋಲಾರ್ ದ್ರಾವಣ ತಯಾರಿಸುವುದು ಹೇಗೆ? (1)

b) ಒಂದು ಮೋಲಾರ್ ದ್ರಾವಣವನ್ನು 0.5 ಮೋಲಾರ್ ದ್ರಾವಣವಾಗಿ ಬದಲಾಯಿಸುವುದು ಹೇಗೆ? (1)

**SET - A**

## SCORING KEY

| Sl.No. | Value Points | Score | Total Score |
|---|---|---|---|
| 1 | a) ಲೋಹದ ಹೈಡ್ರೋಕ್ಸೈಡುಗಳು ಕ್ಷಾರೀಯ ಸ್ವಭಾವವನ್ನು ಪ್ರದರ್ಶಿಸುತ್ತವೆ. | 1 | |
| | b) ಅಯೋನಿಕ್ ಯೌಗಿಕಗಳು ಉಂಟಾಗುತ್ತವೆ. | 1 | 2 |
| 2 | a) 20g ಹೈಡ್ರಜನ್ : 20 GAM = $20\times6.022\times10^{23}$ ಪರಮಾಣುಗಳು | 1 | |
| | b) 24g ಕಾರ್ಬನ್ : 2 GAM = $2\times6.022\times10^{23}$ ಪರಮಾಣುಗಳು | 1 | 2 |
| 3 | a) ಅಮೋನಿಯಂ ಕ್ಲೋರೈಡ್ | 1 | |
| | b) ಬಿಸಿ ಮಾಡುವಾಗ ಅಮೋನಿಯಂ ಕ್ಲೋರೈಡ್ ವಿಭಜನೆ ಹೊಂದಿ ಉಂಟಾಗುವ ಅಮೋನಿಯಂ ಹಾಗೂ HCl ಸೇರಿ | 1 | |
| | c) $NH_4Cl \rightleftharpoons NH_3 + HCl$ / | | |
| | $NH_4Cl \rightarrow NH_3 + HCl$ | 1 | 4 |
| | $NH_3 + HCl \rightarrow NH_4Cl$ | 1 | |
| | **OR** | | |
| | a) ಮೇಂಗನಿಸ್ ಡೈ ಒಕ್ಸೈಡ್ ಸೇರಿಸಿದಾಗ | 1 | |
| | b) ಪ್ರೇರಕ | 1 | |
| | c) ಒಕ್ಸಿಜನ್ | 1 | 4 |
| | d) $2H_2O_2 \rightarrow 2H_2O + O_2$ | 1 | |
| 4 | a) 8 | 1 | |
| | b) Q | 1 | |
| | c) 16 | 1 | 4 |
| | d) $3s^2\ 3p^5$ | 1 | |
| 5 | a) 1 mol $CO_2$<br>2 mol $H_2O$ | 2 | |
| | b) 44g $CO_2$ = 1 mol<br>2 mol $CO_2 = 2\times44 = 88g$ | 2 | 4 |
| 6 | a) ಪ್ರವರ್ತಕಗಳ ಸ್ವಭಾವ 1 | | |
| | b) $H_2$ | 1 | |
| | c) $Zn + 2HCl \rightarrow ZnCl_2 + H_2$ OR<br>$Mg + 2HCl \rightarrow MgCl_2 + H_2$ | 1 | 3 |
| 7 | a) $1s^2\ 2s^2\ 2p^6\ 3s^2\ 3p^6\ 3d^5\ 4s^2$ | 1 | |
| | b) ಲೋಹ | 1 | |
| | c) 3d | 1 | |
| | d) 4 | 1 | 4 |
| 8 | a) $\frac{1}{12}C^{12}\times4$ | 1 | |
| | b) $\frac{1}{12}C^{12}\times16$ or 16 times | 1 | 2 |

| Sl.No. | Value Points | Score | Total Score |
|---|---|---|---|
| 9 | a) ರಾಸಾಯನಿಕ ಕ್ರಿಯೆಯ ದರ = $\frac{\text{ಉಪಯೋಗಿಸಿದ ಪ್ರವರ್ತಕಗಳ ಪರಿಮಾಣ}}{\text{ಸಮಯ}}$<br>= $\frac{5g}{2} = \frac{5}{2}g$ /ಮಿನಿಟ್<br>b) ಪ್ರಬಲತೆ ಹೆಚ್ಚಿರುವ HCl ಉಪಯೋಗಿಸುವುದು ಕ್ಯಾಲ್ಸಿಯಂ ಕಾರ್ಬೋನೇಟನ್ನು ಹುಡಿ ಮಾಡಿ ಸೇರಿಸುವುದು. ಉಷ್ಣತೆಯನ್ನು ಹೆಚ್ಚಿಸುವುದು — ಸೂಕ್ತವಾದ ಯಾವುದಾದರೂ ಎರಡು ಹೇಳಿಕೆಗಳು | 2<br><br>2 | 4 |
| 10 | s ಉಪವಲಯ<br>1s < 2s < 2p < 3s < 3p < 4s < 3d < 4p | 1<br>2 | 3 |
| 11 | a) 10 ಮೋಲ್ ನೀರಿನ ದ್ರವ್ಯರಾಶಿ $= 10 \times 18g$<br>b) 10 ಮೋಲ್ $CO_2$ $= 10 \times 44g$<br>ದ್ರವ್ಯರಾಶಿ ಹೆಚ್ಚುತ್ತಾ ಬರುವ ಕ್ರಮ = 10 mol $H_2O$, 10 mol $CO_2$ | 1<br>1<br>1 | 3 |
| 12 | a) A ಹಾಗೂ B<br>b) C<br>c) D | 1<br>1<br>1 | 3 |
| 13 | a) ಒಂದು ಮೋಲ್ = 180g ಗ್ಲುಕೋಸ್, 180g ಗ್ಲುಕೋಸನ್ನು ಬೀಕರಿನಲ್ಲಿ ತೆಗೆದುಕೊಂಡು ಒಂದು ಲೀಟರ್ ಆಗುವವರೆಗೆ ನೀರನ್ನು ಸೇರಿಸುವುದು.<br>b) ದ್ರಾವಣವು ಎರಡು ಲೀಟರ್ ಆಗುವವರೆಗೆ ನೀರನ್ನು ಸೇರಿಸಿ ಕದಡಿರಿ. | 1<br>1 | 2 |
| | | **40** | **40** |

# ಕಾಲುವಾರ್ಷಿಕ ಮೌಲ್ಯಮಾಪನ 2016-17

**B**

FIRST TERM EVALUATION - 2016

## ರಸಾಯನಶಾಸ್ತ್ರ (CHEMISTRY)

ತರಗತಿ : X

ಸಮಯ : 1½ ಗಂಟೆ

ಅಂಕ : 40

**ಸೂಚನೆಗಳು :**

1. ಹದಿನೈದು ನಿಮಿಷ ಕೂಲ್ ಓಫ್ ಟೈಮ್ ಇದೆ. ಪ್ರಶ್ನೆಗಳನ್ನು ಓದಲು ಮತ್ತು ಉತ್ತರಗಳನ್ನು ಕಂಡುಕೊಳ್ಳಲು ಈ ಸಮಯವನ್ನು ವಿನಿಯೋಗಿಸಬೇಕು.
2. ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿದ ಬಳಿಕ ಮಾತ್ರವೇ ಉತ್ತರಿಸಬೇಕು.
3. ಉತ್ತರ ಬರೆಯುವಾಗ ಸ್ಕೋರ್, ಸಮಯ ಎಂಬಿವುಗಳನ್ನು ಪರಿಗಣಿಸಬೇಕು.

1. ಪರಮಾಣು ಸಂಖ್ಯೆ 26 ಆಗಿರುವ Fe ಎಂಬ ಮೂಲವಸ್ತು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವಾಗ ವಿಭಿನ್ನ ಉತ್ಕರ್ಷಣ ಸ್ಥಿತಿಯಲ್ಲಿರುವ ಅಯೋನುಗಳಾಗಿ ಬದಲಾಗುವುದು.
   a) $Fe^{3+}$ ನ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಬರೆಯಿರಿ. (1)
   b) $Fe^{3+}$ ಅಯೋನ್ ಉಂಟುಮಾಡುವ ಕ್ಲೋರಿನ್ ಯೌಗಿಕದ ರಾಸಾಯನಿಕ ಸೂತ್ರವನ್ನು ಬರೆಯಿರಿ. (1)
   c) Fe ವಿಭಿನ್ನ ಉತ್ಕರ್ಷಣ ಸ್ಥಿತಿಯನ್ನು ಪ್ರದರ್ಶಿಸುವುದಕ್ಕಿರುವ ಕಾರಣವೇನು? (2)

2. 10 ಮೋಲ್ ಹೈಡ್ರಜನ್ ಅಣುಗಳು ಮತ್ತು 10 ಮೋಲ್ ಓಕ್ಸಿಜನ್ ಅಣುಗಳು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುವೆಂದಿರಲಿ. ರಾಸಾಯನಿಕ ಕ್ರಿಯೆಯ ನಂತರ ಬಾಕಿ ಉಳಿಯುವ ಪ್ರವರ್ತಕ ಯಾವುದು? ಅದರ ಪ್ರಮಾಣವೆಷ್ಟು? (2)

3. ಅಧಿಕ ವೇಗದಲ್ಲಿ ಹೈಡ್ರಜನ್ ಅನಿಲವನ್ನು ತಯಾರಿಸಲು ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ಮೆಗ್ನೇಶಿಯಂ ರಿಬ್ಬನಿನ ಬದಲಾಗಿ ಮೆಗ್ನೇಶಿಯಂ ಹುಡಿಯನ್ನು ಉಪಯೋಗಿಸಲಾಯಿತು.
   a) ಮೆಗ್ನೇಶಿಯಂ ಹುಡಿ ಉಪಯೋಗಿಸುವುದಕ್ಕಿರುವ ಕಾರಣವೇನು? (2)
   b) ಇದೇ ರೀತಿಯ ರಾಸಾಯನಿಕ ಕ್ರಿಯಾವೇಗವನ್ನು ಹೆಚ್ಚಿಸುವ ನಿತ್ಯಜೀವನಕ್ಕೆ ಸಂಬಂಧಿಸಿದ ಒಂದು ಸಂದರ್ಭವನ್ನು ಬರೆಯಿರಿ. (1)

4. ಸರಿಯಾದ ಹೇಳಿಕೆಗಳನ್ನು ಆರಿಸಿ ಬರೆಯಿರಿ.
   a) ಎಲ್ಲಾ ವಲಯಗಳಲ್ಲೂ d ಸಬ್‌ಶೆಲ್ ಇದೆ.
   b) p ಸಬ್‌ಶೆಲ್ಲಿನಲ್ಲಿ ಹೆಚ್ಚೆಂದರೆ 6 ಇಲೆಕ್ಟ್ರೋನುಗಳಿರಬಹುದು.
   c) ನ್ಯೂಕ್ಲಿಯಸ್ಸಿನಿಂದ ದೂರ ಹೆಚ್ಚಾದಂತೆ ವಲಯಗಳ ಚೈತನ್ಯ ಕಡಿಮೆಯಾಗುವುದು.
   d) ಕೆಲವೊಂದು *f* ಬ್ಲೋಕ್ ಮೂಲವಸ್ತುಗಳು ರೇಡಿಯೋಏಕ್ಟಿವ್ ಗುಣವನ್ನು ಪ್ರದರ್ಶಿಸುವುವು. (2)

5. ಪಟ್ಟಿಯನ್ನು ಪೂರ್ತಿಗೊಳಿಸಿರಿ. (ಪರಮಾಣು ದ್ರವ್ಯರಾಶಿ : Na - 23, O - 16)) (2)

| ಪದಾರ್ಥ | ಅಣುಗಳ ಸಂಖ್ಯೆ | ಪರಮಾಣುಗಳ ಸಂಖ್ಯೆ | ದ್ರವ್ಯರಾಶಿ |
|---|---|---|---|
| ಸೋಡಿಯಂ | $6.022 \times 10^{23}$ | (a) ................ | 23g |
| ಓಕ್ಸಿಜನ್ | (b) ................ | $2 \times 6.022 \times 10^{23}$ | (c) ................ |
| ಓಝೋನ್ | $6.022 \times 10^{23}$ | (d) ................ | 48g |

6. ಎರಡು ಟೆಸ್ಟ್‌ಟ್ಯೂಬ್‌ಗಳಲ್ಲಿ ದುರ್ಬಲ ಸೋಡಿಯಂ ಥಯೋಸಲ್ಫೇಟ್ ದ್ರಾವಣವನ್ನು ತೆಗೆದುಕೊಳ್ಳಲಾಗುವುದು. ಒಂದು ಟೆಸ್ಟ್ ಟ್ಯೂಬನ್ನು ಬಿಸಿಮಾಡಲಾಗುವುದು. ಕೆಲವು ಬಿಂದು ದುರ್ಬಲ HCl ಆಮ್ಲವನ್ನು ಎರಡಕ್ಕೂ ಸೇರಿಸಲಾಗುವುದು. ಬಿಸಿಮಾಡಿದ ಟೆಸ್ಟ್‌ಟ್ಯೂಬಿನಲ್ಲಿ ಬೇಗನೆ ಅಧಃಕ್ಷೇಪ ಉಂಟಾಗುವುದು.

a) ಬಿಸಿಮಾಡದ ಟೆಸ್ಟ್‌ಟ್ಯೂಬಿನ ನಿರೀಕ್ಷಣೆ ಏನಾಗಿರಬಹುದು? (1)

b) ಉಷ್ಣತೆಯು ರಾಸಾಯನಿಕ ಕ್ರಿಯಾವೇಗದ ಮೇಲೆ ಹೇಗೆ ಪ್ರಭಾವ ಬೀರುವುದು? ವಿವರಿಸಿರಿ. (2)

7. ಕೆಲವು ಮೂಲವಸ್ತುಗಳ ಸಬ್‌ಶೆಲ್ ಇಲೆಕ್ಟ್ರೋನ್ ವಿನ್ಯಾಸವನ್ನು ಕೊಡಲಾಗಿದೆ. (ಸಂಕೇತಗಳು ನಿಜವಾದುದಲ್ಲ)

A - $1s^2 2s^2 2p^5$

B - $1s^2 2s^2 2p^6 3s^2$

C - $1s^2 2s^2 2p^6 3s^2 3p^6 3d^3 4s^2$

D - $1s^2 2s^2 2p^6 3s^2 3p^6 4s^2$

a) ಒಂದೇ ಗುಂಪಿನಲ್ಲಿರುವ ಮೂಲವಸ್ತುಗಳು ಯಾವುವು? (1)

b) ಒಂದೇ ಆವೃತ್ತಿಯಲ್ಲಿರುವ ಮೂಲವಸ್ತುಗಳು ಯಾವುವು? (1)

c) ಪ್ರತಿನಿಧೀಕರಿಸುವ ಮೂಲವಸ್ತುವಲ್ಲದ್ದು ಯಾವುದು? (1)

d) ಅಲೋಹ ಯಾವುದು? (1)

8.




ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವ A, B ಎಂಬ ಅನಿಲಗಳಿರುವ ವ್ಯವಸ್ಥೆಯ ಒತ್ತಡ ಹೆಚ್ಚಾಗುವಾಗ ಅಣುಗಳೊಳಗಿನ ಕೊಲಿಶನ್ ದರವು ಹೇಗೆ ಬದಲಾಗುವುದು? ಇದು ರಾಸಾಯನಿಕ ಕ್ರಿಯಾ ವೇಗವನ್ನು ಹೇಗೆ ಬಾಧಿಸುವುದು? ಚಿತ್ರವನ್ನು ವಿಶ್ಲೇಷಿಸಿ ಉತ್ತರ ಬರೆಯಿರಿ. (3)

9. A. $SO_2$, NaOH

ಮೇಲೆ ಕೊಟ್ಟಿರುವ ಪದಾರ್ಥಗಳನ್ನು 100g ನಂತೆ ತೆಗೆದುಕೊಂಡರೆ ಪರಮಾಣುಗಳ ಸಂಖ್ಯೆ ಹೆಚ್ಚಿರುವುದು ಯಾವುದರಲ್ಲಿ? (ಪರಮಾಣು ದ್ರವ್ಯರಾಶಿ S = 32, O = 16, Na = 23, H = 1) (4)

**ಅಥವಾ**

B. STP ಯಲ್ಲಿರುವ 112 ಲೀಟರ್ $SO_2$ ಅನಿಲವು
(ಪರಮಾಣು ದ್ರವ್ಯರಾಶಿ S = 32, O = 16, N = 14, H = 1)

a) ಎಷ್ಟು GMM ಆಗಿದೆ? (2)

b) ಇಷ್ಟೇ ಗಾತ್ರದ $NH_3$ ಅನಿಲ ಎಷ್ಟು GMM ಆಗಿರಬಹುದು? (2)

10. ತಾಮ್ರದ ಪರಮಾಣು ಸಂಖ್ಯೆ 29. ಇದರ ಇಲೆಕ್ಟ್ರೋನ್ ವಿನ್ಯಾಸವನ್ನು ಕೆಳಗೆ ಕೊಡಲಾಗಿದೆ. ಸರಿಯಾದುದು ಯಾವುದು? ಯಾಕೆ?

a) $1s^2\ 2s^2\ 2p^6\ 3s^2\ 3p^6\ 3d^9\ 4s^2$

b) $1s^2\ 2s^2\ 2p^6\ 3s^2\ 3p^6\ 3d^{10}\ 4s^1$ (2)

11. $N_{2(g)} + 3H_{2(g)} \rightleftharpoons 2NH_{3(g)}$ ಇದು ಒಂದು ಇಕ್ಕಡೆಗಳಲ್ಲಿ ವರ್ತಿಸುವ ರಾಸಾಯನಿಕ ಕ್ರಿಯೆಯಾಗಿದೆ.

a) ಇದರಲ್ಲಿ ಮುಂದಕ್ಕೆ ಜರಗುವ ಮತ್ತು ಹಿಂದಕ್ಕೆ ಜರಗುವ ಕ್ರಿಯೆಗಳನ್ನು ಕಂಡುಹಿಡಿದು ಬರೆಯಿರಿ. (2)

b) ಈ ರಾಸಾಯನಿಕ ಕ್ರಿಯೆ ಸಮತೋಲನ ಸ್ಥಿತಿ ತಲಪುವುದು ಯಾವಾಗ? (1)

12. $H_2 + Cl_2 \rightarrow 2HCl$

ಮೇಲಿನ ರಾಸಾಯನಿಕ ಸಮೀಕರಣವನ್ನು ಪರಿಶೀಲಿಸಿರಿ. ಈ ಕ್ರಿಯೆಯಲ್ಲಿ $6.022 \times 10^{23}$ ಹೈಡ್ರಜನ್ ಅಣುಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಭಾವಿಸಿರಿ.

a) ಕ್ಲೋರಿನಿನ ಎಷ್ಟು ಅಣುಗಳು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸಬಹುದು? (1)

b) ಎಷ್ಟು ಮೋಲ್ ಹೈಡ್ರಜನ್ ಕ್ಲೋರೈಡ್ ಉಂಟಾಗಬಹುದು? (1)

13. ಆವರ್ತಕ ಪಟ್ಟಿಯ ಒಂದು ಭಾಗವನ್ನು ಕೆಳಗೆ ಕೊಡಲಾಗಿದೆ. (ಸಂಕೇತಗಳು ನಿಜವಾದುದಲ್ಲ)




a) ಗಾತ್ರ ಹೆಚ್ಚಿರುವ ಪರಮಾಣು ಯಾವುದು? (1)

b) ಅಯೋನೈಸೇಶನ್ ಚೈತನ್ಯ ಅತೀ ಹೆಚ್ಚಿರುವ ಮೂಲವಸ್ತು ಯಾವುದು? (1)

c) ಇಲೆಕ್ಟ್ರೋನ್ ವಿನ್ಯಾಸ $2s^2 2p^3$ ಯಲ್ಲಿ ಕೊನೆಗೊಳ್ಳುವ ಮೂಲವಸ್ತು ಯಾವುದು? (1)

14. ಒಂದು ಲೀಟರ್ ಒಂದು ಮೋಲಾರ್ ಸೋಡಿಯಂ ಕ್ಲೋರೈಡ್ (NaCl) ದ್ರಾವಣ ತಯಾರಿಸಲಾಗುವುದು. (Na = 23, Cl = 35.5)

a) ಎಷ್ಟು ಗ್ರಾಂ ಸೋಡಿಯಂ ಕ್ಲೋರೈಡ್ ಬೇಕಾಗುವುದು? ಈ ದ್ರಾವಣವನ್ನು ತಯಾರಿಸುವುದು ಹೇಗೆ? (2)

b) ಈ ದ್ರಾವಣದ ಪ್ರಬಲತೆಯನ್ನು 0.5M ಆಗಿ ಬದಲಾಯಿಸಲು ಏನು ಮಾಡಬೇಕು? (1)

***

## SET - B

## SCORING KEY

| Sl.No. | Value Points | Score | Total Score |
|---|---|---|---|
| 1 | a) $1s^2 2s^2 2p^6 3s^2 3p^6 3d^5$ | 1 | |
| | b) $FeCl_3$ | 1 | |
| | c) • ಬಾಹ್ಯ ವಲಯದ s ಉಪವಲಯದ ಚೈತನ್ಯವು ಸಮೀಪದ ಒಳ ವಲಯದಲ್ಲಿರುವ d ಉಪವಲಯದ ಇಲೆಕ್ಟ್ರೋನುಗಳ ಚೈತನ್ಯವು ಸರಿಸುಮಾರು ಸಮಾನವಾದುದರಿಂದ | 1 | |
| | • s ಉಪವಲಯದ ಇಲೆಕ್ಟ್ರೋನುಗಳು ಒಂಟಿಯಾಗಿಯೋ s ನ ಇಲೆಕ್ಟ್ರೋನುಗಳೊಂದಿಗೆ d ಉಪವಲಯದ ಇಲೆಕ್ಟ್ರೋನುಗಳು ಒಂದಾಗಿಯೋ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುದರಿಂದ | 1 | 4 |
| 2 | ಓಕ್ಸಿಜನ್ | 1 | |
| | 5 ಮೋಲ್ ಓಕ್ಸಿಜನ್ / ಓಕ್ಸಿಜನ್ | 1 | 2 |
| 3 | a) ಹುಡಿ ಮಾಡಿ ಸೇರಿಸುವಾಗ ಸಂಪರ್ಕಕ್ಕೆ ಬರುವ ಅಣುಗಳ ಮೇಲ್ಮೈ ವಿಸ್ತೀರ್ಣವು ಹೆಚ್ಚುವುದರಿಂದ ಕೊಲಿಶನ್ ಗಳ ಸಂಖ್ಯೆ ಹೆಚ್ಚಾಗುತ್ತದೆ. | 2 | |
| | b) ಸೂಕ್ತವಾದ ಉತ್ತರ | 1 | 3 |
| 4 | b) p ಉಪವಲಯದಲ್ಲಿ ಗರಿಷ್ಠ 6 ಇಲೆಕ್ಟ್ರೋನುಗಳು ಇರುತ್ತವೆ. | 1 | |
| | d) ಕೆಲವು f ಬ್ಲೋಕ್ ಮೂಲವಸ್ತುಗಳು ರೇಡಿಯೋ ಏಕ್ಟಿವ್ ಸ್ವಭಾವವನ್ನು ಪ್ರದರ್ಶಿಸುತ್ತವೆ. | 1 | 2 |
| 5 | a) $1\times6.022\times10^{23}$ | ½ | |
| | b) $6.022\times10^{23}$ | ½ | |
| | c) 32g | ½ | |
| | d) $3\times6.022\times10^{23}$ | ½ | 2 |
| 6 | a) ಬಿಳಿ ಬಣ್ಣದ ಅಧಃಕ್ಷೇಪವು ಬಹಳ ನಿಧಾನವಾಗಿ ಉಂಟಾಗುತ್ತದೆ. (ನಸು ಹಳದಿ ಬಣ್ಣದ) | 1 | |
| | b) ಉಷ್ಣತೆಯು ಹೆಚ್ಚಾಗುವಾಗ ಅಣುಗಳ ಗತಿ ಚೈತನ್ಯವು ಹೆಚ್ಚಾಗುತ್ತದೆ ಮತ್ತು ಢಿಕ್ಕಿ ಹೊಡೆಯುವಿಕೆಯ ವೇಗವು ಹೆಚ್ಚಾಗುತ್ತದೆ. | 2 | 3 |
| 7 | a) B ಮತ್ತು D | 1 | |
| | b) C ಮತ್ತು D | 1 | |
| | c) C | 1 | |
| | d) A | 1 | 4 |
| 8 | ಒತ್ತಡವು ಹೆಚ್ಚಾಗುವಾಗ ಅಣುಗಳು ಹತ್ತಿರಕ್ಕೆ ಬರುತ್ತವೆ. ಗಾತ್ರವು | 1 | |
| | ಕಡಿಮೆಯಾಗುತ್ತದೆ. ಢಿಕ್ಕಿ ಹೊಡೆಯುವಿಕೆಯ ಸಂಖ್ಯೆ ಹೆಚ್ಚಾಗುತ್ತದೆ. | 1+1 | 3 |

| Sl.No. | Value Points | Score | Total Score |
|---|---|---|---|
| 9 | $SO_2$ ವಿನ ಅಣುವಿಕ ದ್ರವ್ಯರಾಶಿ<br>= 32 + 2×16 = 32 + 32 = 64 | ½ | |
| | 100g $SO_2$ ವಿನಲ್ಲಿರುವ ಅಣುಗಳ ಸಂಖ್ಯೆ : $\frac{100}{64}\times 6.022\times 10^{23}$ | ½ | |
| | NaOH ನ ಅಣುವಿಕ ದ್ರವ್ಯರಾಶಿ<br>= 23 + 16 + 1 = 40 | ½ | 4 |
| | 100g NaOH ನಲ್ಲಿರುವ ಅಣುಗಳ ಸಂಖ್ಯೆ. : $\frac{100}{40}\times 6.022\times 10^{23}$ | ½ | |
| | 100g NaOH ನಲ್ಲಿರುವ ಅಣುಗಳ ಸಂಖ್ಯೆ ಹೆಚ್ಚಾಗಿರುವುದು. | 1 | |
| | $= \frac{100}{40}\times 6.022\times 10^{23} > \frac{100}{64}\times 6.022\times 10^{23}$ | 1 | |
| | OR | | |
| | a) STP ಯಲ್ಲಿ ಯಾವುದೇ ಅನಿಲದ 1mol = 22.4 L | 1 | |
| | $\therefore$ 112 L = $\frac{112}{22.4}$ mol = 5 mol = 5GMM | 1 | |
| | b) 5 GMM | 2 | 4 |
| 10 | ಸರಿಯಾದುದು b | 1 | |
| | d ಉಪವಲಯದಲ್ಲಿ ಪೂರ್ಣವಾಗಿ ತುಂಬಿದ ಇಲೆಕ್ಟ್ರೋನ್ ವಿನ್ಯಾಸಕ್ಕೆ ಸ್ಥಿರತೆ ಹೆಚ್ಚಿರುವುದರಿಂದ $3d^{10}4s^1$ ಎಂಬ ಇಲೆಕ್ಟ್ರೋನ್ ವಿನ್ಯಾಸವನ್ನು ಸ್ವೀಕರಿಸುತ್ತದೆ. | 1 | 2 |
| 11 | a) ಮುಂದಕ್ಕೆ ಜರಗುವ ಕ್ರಿಯೆ - $N_{2(g)} + 3H_{2(g)} \rightarrow 2NH_{3(g)}$ | 1 | |
| | ಹಿಂದಕ್ಕೆ ಜರಗುವ ಕ್ರಿಯೆ $2NH_{3(g)} \rightarrow N_{2(g)} + 3H_{2(g)}$ | 1 | 3 |
| | b) ಮುಂದಕ್ಕೆ ಮತ್ತು ಹಿಂದಕ್ಕೆ ಜರಗುವ ಕ್ರಿಯೆಗಳ ದರವು ಸಮಾನವಾದಾಗ | 1 | |
| 12 | a) $6.022\times 10^{23}$ | 1 | |
| | b) 2 ಮೋಲ್ / $2\times 6.022\times 10^{23}$ | 1 | 2 |
| 13 | a) Q | 1 | |
| | b) T | 1 | 3 |
| | c) S | 1 | |
| 14 | a) • NaCl ನ ಅಣುವಿಕ ದ್ರವ್ಯರಾಶಿ = 23 + 35.5 = 58.5 | 1 | |
| | • 58.5g NaCl ಬೇಕಾಗುವುದು. | | |
| | • 58.5g NaCl ಒಂದು ಬೀಕರಿನಲ್ಲಿ ತೆಗೆದು ಒಂದು ಲೀಟರ್ ಆಗುವವರೆಗೆ ನೀರನ್ನು ಸೇರಿಸಿ ಕದಡಿ ದ್ರಾವಣವನ್ನು ತಯಾರಿಸುವುದು. | 1 | |
| | b) ಒಂದು ಲೀಟರ್ ನೀರನ್ನು ಸೇರಿಸುವುದು. | 1 | 3 |
| | | **40** | **40** |

# ಕಾಲುವಾರ್ಷಿಕ ಮೌಲ್ಯಮಾಪನ 2016–17

C

FIRST TERM EVALUATION - 2016

## ರಸಾಯನಶಾಸ್ತ್ರ (CHEMISTRY)

ತರಗತಿ : X

ಸಮಯ : 1½ ಗಂಟೆ

ಅಂಕ : 40

**ಸೂಚನೆಗಳು :**

1. ಹದಿನೈದು ನಿಮಿಷ ಕೂಲ್ ಓಫ್ ಟೈಮ್ ಇದೆ. ಪ್ರಶ್ನೆಗಳನ್ನು ಓದಲು ಮತ್ತು ಉತ್ತರಗಳನ್ನು ಕಂಡುಕೊಳ್ಳಲು ಈ ಸಮಯವನ್ನು ವಿನಿಯೋಗಿಸಬೇಕು.
2. ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿದ ಬಳಿಕ ಮಾತ್ರವೇ ಉತ್ತರಿಸಬೇಕು.
3. ಉತ್ತರ ಬರೆಯುವಾಗ ಸ್ಕೋರ್, ಸಮಯ ಎಂಬಿವುಗಳನ್ನು ಪರಿಗಣಿಸಬೇಕು.

1. ಕೆಳಗೆ ನೀಡಲಾದ ಹೇಳಿಕೆಗಳಿಂದ ಪರಮಾಣುವಿಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ ಬರೆಯಿರಿ. (2)
   a) ಎಲ್ಲ ಪರಮಾಣುಗಳ ನ್ಯೂಕ್ಲಿಯಸ್ಸಿನ ಸುತ್ತಲೂ 4 ವಲಯಗಳಿವೆ.
   b) ಎಲ್ಲ ವಲಯಗಳಲ್ಲೂ ಇರುವ ಉಪವಲಯ 's' ಆಗಿದೆ.
   c) ಮೂರನೆಯ ವಲಯದಲ್ಲಿ ನಾಲ್ಕು ಉಪವಲಯಗಳು ಕಂಡುಬರುತ್ತವೆ.
   d) ನ್ಯೂಕ್ಲಿಯಸ್ಸಿನಿಂದ ದೂರ ಹೋದ ಹಾಗೆ ವಲಯಗಳ ಚೈತನ್ಯವು ಹೆಚ್ಚಾಗುತ್ತದೆ.

2. $H_2 + Cl_2 \rightarrow 2HCl$
   $2H_2 + O_2 \rightarrow 2H_2O$
   $3H_2 + N_2 \rightarrow 2NH_3$
   ನೀಡಲಾದ ಸಮೀಕರಣಗಳನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
   a) 4 HCl ಅಣುಗಳು ಲಭಿಸಲು ಹೈಡ್ರಜನ್ ಹಾಗೂ ಕ್ಲೋರಿನಿನ ಎಷ್ಟು ಅಣುಗಳು ಬೇಕಾಗುವುದು? (1)
   b) ಹೈಡ್ರಜನ್ ಮತ್ತು ನೈಟ್ರಜನ್ ಯಾವ ನಿಷ್ಪತ್ತಿಯಲ್ಲಿ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸಿದಾಗ ಅಮೋನಿಯಾದ ನಾಲ್ಕು ಅಣುಗಳು ಲಭಿಸುತ್ತವೆ? (1)
   c) ಹೈಡ್ರಜನಿನ 2 ಅಣುಗಳು ಓಕ್ಸಿಜನಿನ 2 ಅಣುಗಳೊಂದಿಗೆ ಸೇರಿದಾಗ ನೀರಿನ ಎಷ್ಟು ಅಣುಗಳು ಲಭಿಸುತ್ತವೆ? (1)

3. ಎರಡು ಪ್ರನಾಳಗಳಲ್ಲಿ ಸಮಾನ ಗಾತ್ರದ ಮೆಗ್ನೀಶಿಯಂ ರಿಬ್ಬನಿನ ತುಂಡುಗಳನ್ನು ತೆಗೆದುಕೊಳ್ಳಿರಿ. ಮೊದಲನೆಯ ಪ್ರನಾಳದಲ್ಲಿ 1mL ದುರ್ಬಲ HCl ನ್ನು ಮತ್ತು 2ನೆಯ ಪ್ರನಾಳದಲ್ಲಿ 1mL ಪ್ರಬಲ HCl ನ್ನು ತೆಗೆದುಕೊಳ್ಳಿರಿ.
   a) ಎರಡೂ ಪ್ರನಾಳಗಳಲ್ಲಿ ನೀವು ಏನನ್ನು ನಿರೀಕ್ಷಣೆ ಮಾಡುವಿರಿ? (2)
   b) ಈ ನಿರೀಕ್ಷಣೆಗಳಿಗಿರುವ ಕಾರಣವನ್ನು ವಿವರಿಸಿರಿ. (2)

4. A. $MnO_2$, $MnCl_2$, $Mn_2O_7$ ಎಂಬಿವುಗಳು Mn ನ ವಿಭಿನ್ನ ಯೌಗಿಕಗಳಾಗಿವೆ. (Mn ನ ಪರಮಾಣು ಸಂಖ್ಯೆ 25)
   a) ವಿಭಿನ್ನ ಯೌಗಿಕಗಳನ್ನು ಉಂಟುಮಾಡಲು Mn ನ ಯಾವ ವೈಶಿಷ್ಟ್ಯವು ಕಾರಣವಾಗಿದೆ ಎಂಬುದನ್ನು ವಿವರಿಸಿರಿ. (3)
   b) $MnO_2$ ನಲ್ಲಿ Mn ನ ಉತ್ಕರ್ಷಣಾ ಸ್ಥಿತಿಯನ್ನು ಕಂಡುಹಿಡಿಯಿರಿ. (1)

**OR**

   B. ಒಂದು ಮಧ್ಯಸ್ಥ ಮೂಲವಸ್ತುವಿನ ಉಪವಲಯ ಇಲೆಕ್ಟ್ರೋನ್ ವಿನ್ಯಾಸವನ್ನು ಕೆಳಗೆ ನೀಡಲಾಗಿದೆ.
   $1s^2\ 2s^2\ 2p^6\ 3s^2\ 3p^6\ 3d^9\ 4s^2$
   $1s^2\ 2s^2\ 2p^6\ 3s^2\ 3p^6\ 3d^{10}\ 4s^1$
   a) ಹೆಚ್ಚು ಸರಿಯಾದ ಇಲೆಕ್ಟ್ರೋನ್ ವಿನ್ಯಾಸವು ಯಾವುದು? ಯಾಕೆ? (2)
   b) ಈ ಮೂಲವಸ್ತುವಿನ ಪರಮಾಣು ಸಂಖ್ಯೆ ಎಷ್ಟು? (1)
   c) ಈ ಮೂಲವಸ್ತು ಯಾವ ಆವೃತ್ತಿಗೆ ಸೇರಿದೆ? (1)

5. 320 ಒಕ್ಸಿಜನಿನಲ್ಲಿ ಕೆಳಗೆ ಹೇಳಿದವುಗಳನ್ನು ಲೆಕ್ಕ ಹಾಕಿರಿ. (ಪರಮಾಣು ದ್ರವ್ಯರಾಶಿ: O = 16)

a) ಮೋಲ್ ಪರಮಾಣುಗಳ ಸಂಖ್ಯೆ (1)

b) ಮೋಲ್ ಅಣುಗಳ ಸಂಖ್ಯೆ (1)

6.




a) ಬಿಳಿಯಾದ ದಟ್ಟವಾದ ಹೊಗೆಗೆ ಕಾರಣವಾದ ಪದಾರ್ಥ ಯಾವುದು? (1)

b) ಈ ಪದಾರ್ಥವನ್ನು ಬಿಸಿ ಮಾಡಿದಾಗ ಲಭಿಸುವ ಉತ್ಪನ್ನಗಳು ಯಾವುವು? (1)

c) ರಾಸಾಯನಿಕ ಕ್ರಿಯೆಗಳ ಸಮೀಕರಣವನ್ನು ಬರೆಯಿರಿ. (2)

7.




ಆವರ್ತಕ ಪಟ್ಟಿಯ ಒಮದು ಭಾಗವನ್ನು ಮೇಲೆ ಕೊಡಲಾಗಿದೆ. (ಸಂಕೇತಗಳು ನಿಜವಾದವುಗಳಲ್ಲ)

a) ಪ್ರತಿನಿಧೀಕರಿಸುವ ಮೂಲವಸ್ತುಗಳು ಅಲ್ಲದವುಗಳು ಯಾವುವು ? (1)

b) $1s^2\ 2s^2\ 2p^4$ ಎಂಬ ಇಲೆಕ್ಟ್ರೋನ್ ವಿನ್ಯಾಸವಿರುವ ಮೂಲವಸ್ತು ಯಾವುದು ? (1)

c) P ಮತ್ತು T ಗಳು ಸೇರಿ ಉಂಟಾಗುವ ಯೌಗಿಕದ ಅಣುಸೂತ್ರವನ್ನು ಸಂಯೋಜಕತೆಯ ಆಧಾರದಲ್ಲಿ ಬರೆಯಿರಿ. (2)

8. ಒಂದು ಗ್ಲಾಸು ತುಂಬಾ ನೀರಿದೆ. ನೀರಿನ ದ್ರವ್ಯರಾಶಿ 180g ಆದರೆ ಕೆಳಗೆ ಹೇಳಿದವುಗಳನ್ನು ಕಂಡುಹಿಡಿಯಿರಿ.

a) ಒಟ್ಟು ಅಣುಗಳ ಸಂಖ್ಯೆ (2)

b) ಒಟ್ಟು ಪರಮಾಣುಗಳ ಸಂಖ್ಯೆ (1)

9. ಸೂಕ್ತವಾದ ರೀತಿಯಲ್ಲಿ ಹೊಂದಿಸಿ ಬರೆಯಿರಿ.

| A | B | C |
|---|---|---|
| ಹೈಡ್ರಜನ್ ಪೆರೋಕ್ಸೈಡಿನ ವಿಭಜನೆ | ವೆನೇಡಿಯಂ ಪೆಂಟೋಕ್ಸೈಡ್ | ಋಣ ಪ್ರೇರಕ |
| ಸಲ್ಫ್ಯೂರಿಕ್ ಆಮ್ಲದ ತಯಾರಿ | ಫೋಸ್ಫೋರಿಕ್ ಆಮ್ಲ | ಧನ ಪ್ರೇರಕ |

(2)

10. ಎರಡನೆಯ ಆವೃತ್ತಿಯಲ್ಲಿರುವ ಒಂದು ಮೂಲವಸ್ತುವಿನ ಕೊನೆಯ 5 ಇಲೆಕ್ಟ್ರೋನುಗಳು p ಉಪವಲಯದಲ್ಲಿವೆ. ಹಾಗಾದರೆ ಕೆಳಗೆ ಹೇಳಿದವುಗಳನ್ನು ಕಂಡುಹಿಡಿದು ಬರೆಯಿರಿ.

a) ಸಬ್ ಶೆಲ್ ಇಲೆಕ್ಟ್ರೋನ್ ವಿನ್ಯಾಸ (1)

b) ಗುಂಪು ಸಂಖ್ಯೆ (1)

c) ಯಾವ ಬ್ಲೋಕಿಗೆ ಸೇರಿದೆ? (1)

11. STP ಯಲ್ಲಿರುವ 1 ಮೋಲ್ $CO_2$ ಮತ್ತು 1 ಮೋಲ್ $CH_4$ ಗಳು ಕೆಳಗೆ ನೀಡಲಾದ ಯಾವ ಯಾವ ಸ್ವಭಾವಗಳಲ್ಲಿ ಸಾಮ್ಯ ಹಾಗೂ ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ ಎಂದು ಕಂಡುಹಿಡಿದು ಬರೆಯಿರಿ ಹಾಗೂ ನಿಮ್ಮ ಉತ್ತರವನ್ನು ಸಮರ್ಥಿಸಿರಿ.

(ಪರಮಾಣು ದ್ರವ್ಯರಾಶಿ: C = 12, O = 16, H = 1)

a) ಗಾತ್ರ

b) ಪರಮಾಣುಗಳ ಸಂಖ್ಯೆ

c) ದ್ರವ್ಯರಾಶಿ

d) ಅಣುಗಳ ಸಂಖ್ಯೆ (4)

12. ತಪ್ಪಾದ ಇಲೆಕ್ಟ್ರೋನ್ ವಿನ್ಯಾಸವನ್ನು ಕಂಡುಹಿಡಿದು ಬರೆಯಿರಿ. (ಸಂಕೇತಗಳು ನಿಜವಾದವುಗಳಲ್ಲ)

A - $1s^2 2s^2 3s^2 3p^1$

B - $1s^2 2s^2 2p^6 3s^2 3p^6 3d^1 4s^2$

C - $1s^2 2s^2 2p^7$

D - $1s^2 2s^2 2p^6 3s^2 3p^6 4s^1$ (2)

13. 40g NaOH ನ್ನು ವಿಲೀನಗೊಳಿಸಿ ಜಲೀಯ ದ್ರಾವಣವನ್ನು ತಯಾರಿಸಲಾಯಿತು.

(ಪರಮಾಣು ದ್ರವ್ಯರಾಶಿ : Na = 23, O = 16, H = 1)

a) ಈ ದ್ರಾವಣದ ಮೊಲಾರಿಟಿ ಎಷ್ಟು? (2)

b) ಈ ದ್ರಾವಣಕ್ಕೆ ಇನ್ನೂ ಒಂದು ಲೀಟರ್ ನೀರನ್ನು ಸೇರಿಸಿದಾಗ ದ್ರಾವಣದ ಮೊಲಾರಿಟಿ ಎಷ್ಟಾಗುವುದು? (1)

## SET - C

## SCORING KEY

| Sl.No. | Value Points | Score | Total Score |
|---|---|---|---|
| 1 | b / ಎಲ್ಲ ವಲಯಗಳಲ್ಲೂ ಇರುವ ಉಪವಲಯ s ಆಗಿದೆ.<br>d / ನ್ಯೂಕ್ಲಿಯಸ್ಸಿನಿಂದ ದೂರ ಹೋದ ಹಾಗೆ ವಲಯಗಳ ಚೈತನ್ಯವು ಹೆಚ್ಚಾಗುತ್ತದೆ. | 1<br><br>1 | <br><br>2 |
| 2 | a) $2H_2 + 2Cl_2 \rightarrow 4\ HCl$<br>**OR**<br>ಎರಡು ಹೈಡ್ರಜನ್ ಅಣುಗಳು<br>ಎರಡು ಕ್ಲೋರಿನ್ ಅಣುಗಳು<br>b) 6 : 2 / 3:1<br>c) $2H_2 + O_2 \rightarrow 2H_2O$<br>ನೀರಿನ ಎರಡು ಅಣುಗಳು ಲಭಿಸುತ್ತವೆ. | 1<br><br><br>1<br><br>1 | <br><br><br><br><br>3 |
| 3 | a) ದುರ್ಬಲ HCl ನಲ್ಲಿ ನಿಧಾನವಾಗಿ ಕ್ರಿಯೆಯು ಜರಗುತ್ತದೆ. ಪ್ರಬಲ HCl ನಲ್ಲಿ ಕ್ರಿಯೆಯು ವೇಗವಾಗಿ ಜರಗುತ್ತದೆ.<br>b) ಪ್ರವರ್ತಕಗಳ ಪ್ರಬಲತೆ ಹೆಚ್ಚಾಗುವಾಗ ಒಂದು ನಿಶ್ಚಿತ ಗಾತ್ರದಲ್ಲಿನ ಅಣುಗಳ ಸಂಖ್ಯೆ ಹೆಚ್ಚಾಗುತ್ತದೆ. ಅಣುಗಳ ಸಂಖ್ಯೆ ಹೆಚ್ಚಾದಂತೆ ಢಿಕ್ಕಿ ಹೊಡೆಯುವಿಕೆಗಳ ಸಂಖ್ಯೆ ಹೆಚ್ಚಾಗುತ್ತದೆ. | 1<br>1<br>1<br><br>1 | <br><br><br><br>4 |
| 4 | a) Mn ಗೆ ವಿಭಿನ್ನ ಉತ್ಕರ್ಷಣಾ ಸ್ಥಿತಿಗಳನ್ನು ಪ್ರದರ್ಶಿಸಲಿರುವ ಸಾಮರ್ಥ್ಯ ಹೊರವಲಯದ S ಉಪವಲಯದ ಹಾಗೂ ಸಮೀಪದ ಒಳಗಿನ d ಉಪವಲಯದ ಚೈತನ್ಯದ ವ್ಯತ್ಯಾಸವು ಬಹಳ ಕಡಿಮೆ.<br>ಈ ಇಲೆಕ್ಟ್ರೋನುಗಳನ್ನು ಬಿಟ್ಟುಕೊಟ್ಟು ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುತ್ತದೆ.<br>b) $Mn^x O^{-2}$ $x + (2 \times -2) = 0$<br>$x = +4$<br>**OR**<br>a) $1s^2 2s^2 2p^6 3s^2 3p^6 3d^{10} 4s^1$,<br>d ಉಪವಲಯದ ಪೂರ್ಣವಾಗಿ ತುಂಬಿದ ಇಲೆಕ್ಟ್ರೋನ್ ವಿನ್ಯಾಸಕ್ಕೆ ಸ್ಥಿರತೆ ಹೆಚ್ಚಿರುವುದರಿಂದ<br>$3d^{10} 4s^1$ ಎಂಬ ಇಲೆಕ್ಟ್ರೋನ್ ವಿನ್ಯಾಸವನ್ನು ಸ್ವೀಕರಿಸುವುದು.<br>b) 29<br>c) 4 | <br>1<br>2<br><br><br>1<br><br><br>1<br><br>1<br><br>1<br>1 | <br><br><br><br><br>4 |
| 5 | a) ಮೋಲ್ ಪರಮಾಣುಗಳ ಸಂಖ್ಯೆ = $\frac{\text{ಗ್ರಾಮಿನಲ್ಲಿರುವ ದ್ರವ್ಯರಾಶಿ}}{GAM} = \frac{320}{16}$<br>b) ಮೋಲ್ ಅಣುಗಳ ಸಂಖ್ಯೆ = $\frac{\text{ಗ್ರಾಮಿನಲ್ಲಿರುವ ದ್ರವ್ಯರಾಶಿ}}{GMM} = \frac{320}{32}$ | 1<br>1 | 2 |
| 6 | a) ಅಮೋನಿಯಂ ಕ್ಲೋರೈಡ್ $NH_4Cl$<br>b) $NH_3$, HCl<br>c) $NH_3 + HCl \rightarrow NH_4Cl$<br>$NH_4Cl \rightarrow NH_3 + HCl$ | 1<br>1 | |

| Sl.No. | Value Points | Score | Total Score |
|---|---|---|---|
| | OR<br>$NH_3 + HCl \rightleftharpoons NH_4Cl$ | 2 | 4 |
| 7 | a) R<br>b) T<br>c) $P_2T$ | 1<br>1<br>2 | 4 |
| 8 | a) $H_2O$ ದ MM = 18<br>ಮೋಲ್ ಗಳ ಸಂಖ್ಯೆ = $\frac{180}{18}$ = 10 mol<br>ಒಟ್ಟು ಅಣುಗಳು = $10 \times 6.022 \times 10^{23}$<br>b) ಒಂದು ಅಣುವಿನಲ್ಲಿ 3 ಪರಮಾಣುಗಳು<br>$\therefore$ ಒಟ್ಟು ಪರಮಾಣುಗಳ = $3 \times 10 \times 6.022 \times 10^{23}$ | 2<br>1 | 3 |
| 9 | a) $H_2O_2$ $H_3PO_4$ ಋಣ ಪ್ರೇರಕ<br>b) $H_2SO_4$ $V_2O_5$ ಧನ ಪ್ರೇರಕ | 1<br>1 | 2 |
| 10 | a) $1s^2\ 2s^2\ 2p^5$<br>b) ಗುಂಪು ಸಂಖ್ಯೆ = 17<br>c) ಬ್ಲೋಕ್ = p | 1<br>1<br>1 | 3 |
| 11 | a) ಸಾಮ್ಯತೆ = ಗಾತ್ರ, ಅಣುಗಳ ಸಂಖ್ಯೆ<br>b) ವ್ಯತ್ಯಾಸ = ದ್ರವ್ಯರಾಶಿ, ಪರಮಾಣುಗಳ ಸಂಖ್ಯೆ 1+1 | 1+1<br>4 | |
| 12 | A $1s^2\ 2s^2\ 3s^2\ 3p^1$<br>C $1s^2\ 2s^2\ 2p^6\ 3s^1$ | 1<br>1 | 2 |
| 13 | a) NaOH ನ ಅಣುವಿಕ ದ್ರವ್ಯರಾಶಿ = 23 + 16 + 1 = 40<br>1 mol NaOH = $\frac{40g}{40} = 1mol$<br>ಮೊಲಾರಿಟಿ = $\frac{1mol}{1littre} = 1mol/l$ = 1M<br>b) ಮೊಲಾರಿಟಿ = $\frac{1mol}{2littre} = .5mol/l$ = 0.5M | 2<br><br>1 | 3 |
| | | **40** | **40** |